
ಜೂನ್ 2025

# ವನ್ಯ

ಹಸಿರು ಲೋಕದ ಕೌತುಕ



Aghanaashini Nature Foundation

Flow of Knowledge

# ವನ್ಯ

## ಹಸಿರು ಲೋಕದ ಕೌತುಕ

## ಪರಿವಿಡಿ


| ಕ್ರಮ ಸಂ | ಲೇಖನಗಳು | ಪುಟ ಸಂ |
|---|---|---|
| | **ಕಾಡಿನ ಕತೆಗಳು** | |
| 1 | ಭೂಮಿ ಮೇಲಿನ ಮೊಟ್ಟಮೊದಲ ರೆಕ್ಕೆಯನ್ನು ಹೊಂದಿರುವ ಕೀಟ ಏರೋಪ್ಲೇನ್ ಚಿಟ್ಟೆ - ಪವನ್ ಮೋಹನ್ ರಾವ್ | 1 |
| 2 | ಶ್ರೀ ಅಯ್ಯಪ್ಪ ಭದ್ರಕಾಳಿ, ಬೋಟೆ ಕರುಂಬ, ದೇವರಕಾಡು,ದೇವರಪುರ, ಕೊಡಗು ಜಿಲ್ಲೆ, ಕರ್ನಾಟಕ. (ದೇವರ ಕಾಡಿನಲ್ಲಿ ನಡೆಯುವ ಆಚಾರ ವಿಚಾರಗಳು) - ವಿದ್ಯಾ ಜಗದೀಶ್ ಪುತ್ತಾಮನೆ | 5 |
| 3 | ಹಾವಿನ ಹೆಜ್ಜೆ - ಪರೀಕ್ಷಿತ್ | 10 |
| | **ಸಸ್ಯ ಲೋಕ** | |
| 4 | ಬದುಕು ಹಸಿರಾಗಿಸುವ ಬಡವರ ಹಣ್ಣು ಹುಲುಸಾಗಿ ಬೆಳೆಯುವ ಹಲಸು - ಉಮಾಪತಿ ಭಟ್ಟ ಕೆ ವಿ | 14 |
| | **ಹಸಿರು ಹಾಡು** | |
| 5 | ಕಬೂತ್ತರ್ ಜಾ..ಜಾ...ಜಾ.... - ರಾಜು ಕಿದೂರು | 18 |
| | **ಪ್ರಾಣಿ ಪ್ರಪಂಚದ ವಿಚಿತ್ರ ಪ್ರಭೇದಗಳು** | |
| 6 | ಹಾರುವ ಅಳಿಲು - ನವೀನ ಪ್ಯಾಟಿಮನಿ | 21 |



**ಮುಖ್ಯ ಸಂಪಾದಕರು**

ಕೆ ಪಿ ಧನಂಜಯ್ ಕುಮಾರ್

**ಸಂಪಾದಕೀಯ ತಂಡ**

ವಿಗ್ನೇಶ್ ಆಗುಂಬೆ

ಶ್ರೀನಿಧಿ ರಾಮಚಂದ್ರ ನಾಯ್ಕ

ನಯನ ಆರ್

ಪಾಂಡೀರ ಕೌಶಿಕ್ ಕಾವೇರಪ್ಪ

**ಮುಖಪುಟ:** ಸಿದ್ದು ಅರಕೆರೆ

ಲೇಖನ 01

# ಭೂಮಿ ಮೇಲಿನ ಮೊಟ್ಟಮೊದಲ ರೆಕ್ಕೆಯನ್ನು ಹೊಂದಿರುವ ಕೀಟ ಏರೋಪ್ಲೇನ್ ಚಿಟ್ಟೆ

ಏರೋಪ್ಲೇನ್ ಚಿಟ್ಟೆ/ಹೆಲಿಕ್ಯಾಪ್ಟರ್ ಚಿಟ್ಟೆಯನ್ನು ಇಂಗ್ಲಿಷ್ ನಲ್ಲಿ ಓಡೋನೇಟ್ಸ ಎಂದು ಕರೆಯುತ್ತಾರೆ. ಇವು 325 ಮಿಲಿಯನ್ ವರ್ಷಗಳಷ್ಟು ಹಳೆವು ಎಂದು ಹೇಳಲಾಗಿದೆ. ಓಡೋನೇಟ್ಸ್ ಗಳು ಹಲ್ಲುಗಳನ್ನು ಹೊಂದಿರುವ ಕೀಟಗಳು, ಈ ಕೀಟಗಳು ನಿರ್ದಿಷ್ಟ ಜಲ ಪರಿಸರ ವ್ಯವಸ್ಥೆಯಲ್ಲಿ ಜೀವಿಸುತ್ತವೆ. ಇವುಗಳ ಆವಾಸಸ್ಥಾನ ನಿರ್ದಿಷ್ಟತೆಯಿಂದ ಜಲ ಪರಿಸರ ವ್ಯವಸ್ಥೆಯ ಉತ್ತಮ ಆರೋಗ್ಯ ಸೂಚಕಗಳಾಗಿವೆ.

ಏರೋಪ್ಲೇನ್ ಚಿಟ್ಟೆಗಳು ಕೀಟಗಳ ವರ್ಗಕ್ಕೆ ಸೇರಿದ್ದು ಓಡೋನೇಟ ಎಂಬ ಗುಂಪಿನಲ್ಲಿ ವರ್ಗಿಕರಿಸಲಾಗಿದೆ. ಓಡೋನೇಟಾದಲ್ಲಿ ಎರಡು ಉಪ ಗುಂಪುಗಳಿದ್ದು ಅವುಗಳನ್ನು ಡ್ರ್ಯಾಗನ್ ಫ್ಲೈ (ಅನಿಸೋಪ್ಟೇರಾ), ಡ್ಯಾಮ್ಸಲ್ ಫ್ಲೈ (ಝೈಗೋಪ್ಟೇರಾ) ಎಂದು ಗುರುತಿಸಲಾಗಿದೆ.

ಎರಡು ಒಂದಕ್ಕೊಂದು ಭಿನ್ನವಾದವು. ಇವೆರಡರ ಗಾತ್ರದಲ್ಲಿ ವ್ಯತ್ಯಾಸವಿದ್ದು ಡ್ರ್ಯಾಗನ್ ಫ್ಲೈಸ್ ದೊಡ್ಡದು ಮತ್ತು ಡ್ಯಾಮ್ಸಲ್ ಚಿಕ್ಕದು. ಮತ್ತೊಂದು ವ್ಯತ್ಯಾಸ ಡ್ಯಾಮ್ಸಲ್ ಫ್ಲೈ ರೆಕ್ಕೆಗಳು ಎರಡು ಜೋಡಿ ಇದ್ದು ಒಂದೇ ಗಾತ್ರ ಮತ್ತು ಆಕಾರ ಹೊಂದಿರುತ್ತವೆ. ಆದರೆ ಡ್ರ್ಯಾಗನ್ ಫ್ಲೈ ರೆಕ್ಕೆಗಳು ಎರಡು ಜೋಡಿ ಇದ್ದು ಹಿಂಭಾಗದ ರೆಕ್ಕೆಗಳು ಮುಂಭಾಗದ ರೆಕ್ಕೆಗಿಂತ ಗಾತ್ರದಲ್ಲಿ ದೊಡ್ಡವು.

ಹಾಗೆ ಡ್ರ್ಯಾಗನ್ ಫ್ಲೈಗಳು ವಿಶ್ರಾಂತ ಸ್ಥಿತಿಯಲ್ಲಿದ್ದಾಗ ರೆಕ್ಕೆಗಳನ್ನು ಬಿಚ್ಚಿಕೊಂಡಿರುತ್ತವೆ. ಮತ್ತು ಡ್ಯಾಮ್ ಸೆಲ್ ಫ್ಲೈ ರೆಕ್ಕೆಗಳನ್ನು ಮಡಚಿಕೊಂಡು ವಿಶ್ರಾಂತಿಯಲ್ಲಿ ಕೂತಿರುತ್ತವೆ.



ಚಿತ್ರ ಕೃಪೆ: ಧನಂಜಯ್ ಕುಮಾರ್

ಏರೋಪ್ಲೇನ್ ಚಿಟ್ಟೆಗಳು ಸಾಮಾನ್ಯವಾಗಿ ಕಾಡುಗಳು ಕೆರೆ, ನದಿ, ಹೊಲಗದ್ದೆ, ಜೌಗು ಪ್ರದೇಶದಲ್ಲಿ ಕಾಣಬಹುದು.
ವಿಶ್ವದಲ್ಲಿ ಸುಮಾರು 6335 ಪ್ರಜಾತಿ ಹಾಗೂ ಸುಮಾರು 500ಕ್ಕೂ ಹೆಚ್ಚು ಪ್ರಜಾತಿಗಳು ಭಾರತದಲ್ಲಿ ಗುರುತಿಸಲಾಗಿದೆ. ಭಾರತದಲ್ಲಿನ ವಿಧವಾದ ನೈಸರ್ಗಿಕ ಪರಿಸರ ವೈವಿಧ್ಯ ಈ ಹೆಲಿಕ್ಯಾಪ್ಟರ್ ಚಿಟ್ಟೆಗಳಿಗೆ ಜೀವಿಸಲು ಉತ್ತಮವಾಗಿದೆ.

ದಿ ಫೌನಾ ಆಫ್ ಬ್ರಿಟಿಷ್ ಇಂಡಿಯಾ ಓಡೋನೇಟಾ (1933 36) ದಲ್ಲಿ ಪ್ರಾವುಸರ್ ಪ್ರಥಮ ಬಾರಿಗೆ ದಾಖಲಿಸಿದ್ದಾರೆ. ಏರೋಪ್ಲೇನ್ ಚಿಟ್ಟೆಗಳು ಪರಭಕ್ಷಕಗಳು, ಇವು ಚತುರ ಬೇಟೆಗಾರರು. ಈ ಕೀಟಗಳ ಕಣ್ಣುಗಳು ಅತಿ ದೊಡ್ಡದಾಗಿದ್ದು, ಉತ್ತಮ ದೃಷ್ಟಿಯನ್ನು ಹೊಂದಿವೆ. 360 ಡಿಗ್ರಿ ದೃಷ್ಟಿ ವ್ಯಾಪಕಗೊಳಿಸುವ ಸಾಮರ್ಥ್ಯ ಹೊಂದಿವೆ.


ಚಿತ್ರ ಕೃಪೆ: ಧನಂಜಯ್ ಕುಮಾರ್

ಅತಿ ವೇಗವಾಗಿ ಯಾವ ದಿಕ್ಕಿನ ಕಡೆಗೂ ಹಾರಾಡಬಹುದು. ಅವುಗಳ ರೆಕ್ಕೆಗಳನ್ನು ಹಾರಾಟಕ್ಕೆ ಬೇಕಾದ ತರ ಸರಿಪಡಿಸಿಕೊಳ್ಳುವಂತಹ ಸಾಮರ್ಥ್ಯದಿಂದ ಇವುಗಳನ್ನು ಹೆಲಿಕ್ಯಾಪ್ಟರ್ ಚಿಟ್ಟೆ ಅಥವಾ ಏರೋಪ್ಲೇನ್ ಚಿಟ್ಟೆ ಎಂದು ಕರೆಯುತ್ತಾರೆ. ಹೆಲಿಕ್ಯಾಪ್ಟರ್ ಗಳ ವಿನ್ಯಾಸಕ್ಕೆ ಇವು ಕಾರಣವಾಗಿದೆ ಎನ್ನಬಹುದು. ಈ ಎರಡು ವಿಶಿಷ್ಟ ಸಾಮರ್ಥ್ಯಗಳು ಇವುಗಳನ್ನು ಉತ್ತಮ ಬೇಟೆಗಾರರನ್ನಾಗಿಸಿದೆ.

ಈ ಕೀಟಗಳು ಲೈಂಗಿಕ ದ್ವಿರೂಪತೆಯನ್ನು ತೋರಿಸುತ್ತವೆ. ಗಂಡು ಮತ್ತು ಹೆಣ್ಣು ಏರೋಪ್ಲೇನ್ ಚಿಟ್ಟೆಗಳು ಕೆಲವೊಂದು ರೀತಿಯ ವಿಭಿನ್ನ ಲಕ್ಷಣಗಳನ್ನು ಹೊಂದಿದ್ದು, ಇವುಗಳನ್ನು ಬಣ್ಣದ ಮೂಲಕ ಗಾತ್ರದ ಮೂಲಕ ಅಥವಾ ರೆಕ್ಕೆಗಳ ಮೂಲಕ ಗುರುತಿಸಬಹುದು. ಹೆಣ್ಣು ಕೀಟ ವಿಶಿಷ್ಟವಾದ ಅಂಡಾಶಯಕಾರಕ (ovipositor) ಹೊಂದಿರುತ್ತದೆ.

**ಜೀವನ ಚಕ್ರ**

**೧.ಮೊಟ್ಟೆ:**

ಈ ಕೀಟಗಳು ನೂರರಿಂದ ಸಾವಿರ ಮೊಟ್ಟೆಗಳನ್ನು ಇಡಬಹುದು. ಈ ಮೊಟ್ಟೆಗಳು 5 ರಿಂದ 40 ದಿನಗಳಲ್ಲಿ ಲಾರ್ವಗಳಾಗುವವು. ಇವು ಮೊಟ್ಟೆಗಳನ್ನು ಹರಿಯುವ ತೊರೆಗಳಲ್ಲಿ, ಜಲ ಸಸ್ಯಗಳ ಮೇಲೆ ಇಡುತ್ತವೆ.

**೨. ನಿಂಫ್:**

ಇದೊಂದು ಪರಭಕ್ಷಕ, ಇದರ ನಿಗೂಢವಣ್ಣ ಮತ್ತು ತೀಕ್ಷ್ಣ ದೃಷ್ಟಿಯಿಂದ ಈ ಕೀಟಗಳು ಒಂದು ಪರಿಣಾಮಕಾರಿಯಾಗಿ ಹೊಂಚು ಹಾಕಿ ದಾಳಿ ಮಾಡುವ ಸಾಮರ್ಥ್ಯ ಹೊಂದಿವೆ. ಬಹುಪಾಲು ಜೀವನ ಚಕ್ರ ನೀರಿನಲ್ಲಿ ನಿಂಫ್ ಗಳಾಗಿ ಕಳೆಯುತ್ತವೆ. ಈ ಲಾರ್ವಗಳು ಸುಮಾರು ಎರಡು ವರ್ಷ ಬೆಳವಣಿಗೆಗೆ ಸಮಯ ತೆಗೆದುಕೊಳ್ಳುತ್ತವೆ. ಪ್ರೌಢಾವಸ್ಥೆಗೆ ಬರುವ ಮುನ್ನ ಆಹಾರ ಸ್ವೀಕರಿಸುವುದನ್ನು ನಿಲ್ಲಿಸುತ್ತವೆ. ಸೂರ್ಯೋದಯಕ್ಕೂ ಮುನ್ನ ಲಾರ್ವದಿಂದ ಪ್ರೌಢಾವಸ್ಥೆಗೆ ತಲುಪುತ್ತವೆ.

**3. ಪ್ರೌಢಾವಸ್ಥೆ:**

1, 2 ವಾರಗಳಲ್ಲಿ ಪ್ರೌಢಾವಸ್ಥೆಗೆ ತಲುಪುತ್ತವೆ. ಈ ಸಮಯದಲ್ಲಿ ಬಣ್ಣ ಮತ್ತು ರೆಕ್ಕೆಗಳಲ್ಲಿ ಬದಲಾವಣೆಗಳನ್ನು ನೋಡಬಹುದು. ಈ ಕೀಟಗಳು ಸುಮಾರು 6 ರಿಂದ 8 ವಾರಗಳವರೆಗೆ ಜೀವಿಸುತ್ತವೆ.


ಚಿತ್ರ ಕೃಪೆ: ಧನಂಜಯ್ ಕುಮಾರ್

ಈ ಕೀಟಗಳು ಉತ್ತಮ ಹಾರಾಟ ಹೊಂದಿದೆ. ಅಧ್ಯಯನದ ಪ್ರಕಾರ 25 ರಿಂದ 30 ಕಿಲೋಮೀಟರ್ ಪ್ರತೀ ಗಂಟೆಗೆ ಹಾರಾಡುವ ಸಾಮರ್ಥ್ಯ ಹೊಂದಿವೆ.

ಪಂಟಾಲ ಫ್ಲಾವಿಸೆನ್ಸ್ ಎಂಬ ಒಂದು ಪ್ರಜಾತಿ ವಲಸೆ ಕೂಡ ಹೋಗುತ್ತದೆ.



ಚಿತ್ರ ಕೃಪೆ: ಸಮರ್ಥ

ಈ ಏರೋಪ್ಲೇನ್ ಕೀಟಗಳ ಬಣ್ಣಗಳಲ್ಲಿ ಗಂಡು ಗಾಡ ಬಣ್ಣ ಮತ್ತು ಹೆಣ್ಣು ಮಂದ ಬಣ್ಣ ಹೊಂದಿರುತ್ತವೆ. ಈ ಬಣ್ಣ ಮತ್ತು ರೆಕ್ಕೆಯು ತಮ್ಮ ಪ್ರಣಯದ ಸಮಯದಲ್ಲಿ ಮತ್ತು ತಮ್ಮ ಪ್ರದೇಶ ಗುರುತಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಆಹಾರ ಕ್ರಮ ಹಗಲಿನಲ್ಲಿಯೂ ಚುರುಕಾಗಿದ್ದು, ಉತ್ತಮ ಬೇಟೆಗಾರರೆನಿಸಿಕೊಂಡಿವೆ. ಕೆಲವೊಂದು ಪ್ರಭೇದಗಳು ಉದಾಹರಣೆಗೆ ಡಾರ್ಟರ್ ಹಾರಾಡುವ ಸಮಯದಲ್ಲಿಯೇ ಆಹಾರ ಸೇವಿಸುತ್ತದೆ, ಇದಕ್ಕಾಗಿ ಬಲವಾದ ಕಾಲುಗಳು ಮಾರ್ಪಾಡಾಗಿವೆ.

ಈ ಒಡೋನೇಟಗಳು ಸೂರ್ಯನಿಂದ ಶಾಖ ತಡೆಯಲು ಉಷ್ಣ ನಿಯಂತ್ರಣ ಕಾರ್ಯವಿಧಾನ ಬಳಸಿಕೊಳ್ಳುತ್ತದೆ. ನೀರಿನಲ್ಲಿ ಮುಳುಗಿ ಏಳುವುದು, ನೆಲದ ಮೇಲೆ ಓರೆಯಾಗಿ ಮತ್ತು ಲಂಬವಾಗಿ ಕೂತುಕೊಳ್ಳುವ ಮೂಲಕ ದೇಹವನ್ನು ಸೂರ್ಯನ ಶಾಖಕ್ಕೆ ಒಡ್ಡದಂತೆ ನೋಡಿಕೊಳ್ಳುತ್ತವೆ.

**ಈ ಕೀಟಗಳ ಪ್ರಾಮುಖ್ಯತೆ**

ಲಾರ್ವ(ನಿಂಫ) ಮತ್ತು ಪ್ರೌಢಾವಸ್ಥೆಯಲ್ಲಿ ಇವು ಪರಭಕ್ಷಕಗಳಾಗಿವೆ. ಹೀಗಾಗಿ ಜಲ ಪರಿಸರ ವ್ಯವಸ್ಥೆಯಲ್ಲಿ ಬಹು ಮುಖ್ಯಪಾತ್ರ ಹೊಂದಿವೆ. ಇವು ಕೃಷಿಗೆ ಅಪಾಯಕಾರಿಯಾಗುವ ಬಹಳಷ್ಟು ಕೀಟಗಳನ್ನು ತಿಂದು ಕೀಟ ನಿಯಂತ್ರಕಗಳಾಗಿ ಕಾರ್ಯನಿರ್ವಹಿಸುತ್ತವೆ.

ಒಂದು ಅಧ್ಯಯನದ ಪ್ರಕಾರ ಈ ಕೀಟಗಳು ಈ ಕೀಟಗಳು ದಿನಕ್ಕೆ ನೂರಕ್ಕೂ ಹೆಚ್ಚು ಸೊಳ್ಳೆಗಳನ್ನು ಮತ್ತು ಸೊಳ್ಳೆಗಳ ಲಾರ್ವ ತಿನ್ನುತ್ತವೆ. ಇದರಿಂದಾಗಿ ಡೆಂಗು ಹರಡುವಂತಹ ಸೊಳ್ಳೆಗಳನ್ನು ನಿಯಂತ್ರಣದಲ್ಲಿ ಇಡಲು ಸಹಕಾರಿಯಾಗಿದೆ. ಪರಿಸರ ವ್ಯವಸ್ಥೆಯಲ್ಲಿ ಅತಿ ಚಿಕ್ಕ ಬದಲಾವಣೆಯನ್ನು ಸೂಚಿಸುವ ಇವು, ಜಲ ಪರಿಸರ ವ್ಯವಸ್ಥೆಯ ಉತ್ತಮ ಆರೋಗ್ಯ ಸೂಚಕಗಳಾಗಿವೆ ಎಂದು ಇತ್ತೀಚಿನ ವರದಿಗಳಿಂದ ತಿಳಿದು ಬಂದಿದೆ. ಹೀಗಾಗಿ ಈ ಕೀಟಗಳು ನೀರಿನ ಗುಣಮಟ್ಟದ ಜೈವಿಕ ಸೂಚಕಗಳಾಗಿವೆ. ನೀರಿನ ಭೌತಿಕ ಮತ್ತು ರಾಸಾಯನಿಕ ಗುಣಗಳ ಬದಲಾವಣೆ, ಇವುಗಳ ವೈವಿಧ್ಯತೆಯಲ್ಲಿ ಏರುಪೇರು ಕಾಣಬಹುದು.



ಚಿತ್ರ ಕೃಪೆ: ಧನಂಜಯ್ ಕುಮಾರ್

ಆಹಾರ ಸರಪಳಿಯಲ್ಲಿ ಈ ಕೀಟಗಳು ಪಕ್ಷಿಗಳು ಮತ್ತು ಮೀನುಗಳಿಗೆ ಆಹಾರಗಳಾಗಿವೆ. ಆವಾಸಸ್ಥಾನ ಬದಲಾವಣೆ, ಕೃಷಿಯ ವಿಸ್ತರಣೆ, ಅರಣ್ಯ ನಾಶ, ಮಾಲಿನ್ಯ, ಜೌಗು ತಾಣಗಳ ಬದಲಾವಣೆ ಇತ್ಯಾದಿ ಈ ಕೀಟಗಳಿಗೆ ಅಪಾಯ ತಂದೊದಗಿಸಿವೆ. ನೀರಿನ ಮೂಲಗಳ ಸಂರಕ್ಷಣೆ, ಜೀವವೈವಿಧ್ಯ ಕಾರ್ಯಕ್ರಮಗಳು, ರಾಷ್ಟ್ರೀಯ ನೀತಿ ಮತ್ತು ಕಾನೂನುಗಳಿಂದ ಮಾತ್ರ ಅಪಾಯಗಳನ್ನು ತಡೆದು ಈ ಕೀಟಗಳ ಸಂರಕ್ಷಣೆ ಮಾಡಬಹುದು ಇಲ್ಲದಿದ್ದರೆ ಕೀಟಗಳು ಅಪಾಯದ ಅಂಚು ತಲುಪುವ ದಿನಗಳು ಬರಬಹುದು.



ಚಿತ್ರ ಕೃಪೆ: ಸಮರ್ಥ

**ಏಕೆ ಈ ಕೀಟಗಳ ಅಧ್ಯಯನ**

ಡ್ರ್ಯಾಗನ್ ಫ್ಲೈ ಮತ್ತು ಡ್ಯಾಮ್ಸೆಲ್ ಫ್ಲೈ ಗಳು ಮಾನವನ ವಿಕಾಸಕ್ಕಿಂತಲೂ ಪೂರ್ವದಲ್ಲಿ ಹುಟ್ಟಿಕೊಂಡಿರುವ ಕೀಟಗಳಾಗಿವೆ. ಹಾಗಾಗಿ ಅವುಗಳ ಸಂರಕ್ಷಣೆ ಮಹತ್ವ ಪಡೆದುಕೊಂಡಿದೆ. ಈ ಕೀಟಗಳು ಉಷ್ಣವಲಯ ಭೂ ಪ್ರದೇಶಗಳ ಪ್ರಮುಖವಾದ ಮತ್ತು ಆಕರ್ಷಿತವಾದ ಕೀಟಗಳು. ಇವುಗಳ ಅಧ್ಯಯನ, ಪರಿಸರ ವ್ಯವಸ್ಥೆ ಅತಿ ಮುಖ್ಯವಾಗಿ ಜೌಗು ಪ್ರದೇಶಗಳ ಆರೋಗ್ಯ ಬಗ್ಗೆ ತಿಳಿಸಿಕೊಡುತ್ತವೆ.

ಸಂಶೋಧನಾರ್ಥಿಗಳು, ವಿಜ್ಞಾನಿಗಳು, ಪರಿಸರ ಆಸಕ್ತರು ಮೊದಲಾದವರು ಸೇರಿಕೊಂಡು ಈ ಕೀಟಗಳನ್ನು ಸಂರಕ್ಷಣೆ ಮಾಡುವ ಜವಾಬ್ದಾರಿ ಇದೆ. ಇದರ ಬಗ್ಗೆ ಹಲವು ಔಟ್ ರಿಚ್ ಕಾರ್ಯಕ್ರಮಗಳು, ಕಾರ್ಯಗಾರಗಳ ಮೂಲಕ ಸಂಶೋಧನೆ ಕಡೆ ಮುಖ ಮಾಡಲು ಮತ್ತು ಸಂರಕ್ಷಣೆ ಮಾಡಲು ಪ್ರೇರೇಪಿಸಬೇಕಾಗಿದೆ.

**ಯಾವಾಗ ಮತ್ತು ಎಲ್ಲಿ ಈ ಕೀಟಗಳನ್ನು ನೋಡಬಹುದು**

ಮುಂಜಾನೆಯ 9 ರಿಂದ 1 ಗಂಟೆಯ ವರೆಗೆ ಕೆರೆ, ನದಿ, ಹರಿಯುವ ತೊರೆಗಳು, ಅರಣ್ಯ, ಉದ್ಯಾನವನಗಳಲ್ಲಿ ವೀಕ್ಷಿಸಬಹುದು. ಮೇ ನಿಂದ ನವೆಂಬರ್ ವರೆಗೆ ಕಾಣಬಹುದಾಗಿದೆ. ಅಂಟಾರ್ಟಿಕ ಪ್ರದೇಶವನ್ನು ಬಿಟ್ಟು ಬೇರೆ ಎಲ್ಲ ಕಡೆ ಈ ಕೀಟಗಳನ್ನು ಕಾಣಬಹುದು. ಈ ಕೀಟಗಳ ಬಗ್ಗೆ ಮತ್ತು ಅವುಗಳ ಹೆಸರುಗಳನ್ನು ತಿಳಿದುಕೊಳ್ಳಲು ಹಲವು ಆಕರಗಳಿದ್ದು ಅವುಗಳಲ್ಲಿ ಇಂಡಿಯಾ ಬಯೋಡೈವರ್ಸಿಟಿ ಪೋರ್ಟಲ್, ಆಯ್ ನ್ಯಾಚುರಲಿಸ್ಟ ಪೋರ್ಟಲ್, ಫೇಸ್ಬುಕ್ ಗ್ರೂಪ್ ಗಳಾದ ಡ್ರ್ಯಾಗನ್ ಫ್ಲೈ ಸೌತ್ ಏಷ್ಯಾ ಇತ್ಯಾದಿ ಮತ್ತು ಉತ್ತಮ ಪುಸ್ತಕಗಳು ಸಹಕಾರಿಯಾಗುತ್ತವೆ.

**ಪವನ್ ಮೋಹನ್ ರಾವ್**
ಪ್ರಾಣಿ ಶಾಸ್ತ್ರ ಪ್ರಾಧ್ಯಾಪಕರು
ಶರಣಬಸವೇಶ್ವರ ವಿಜ್ಞಾನ ಮಹಾವಿದ್ಯಾಲಯ, ಕಲಬುರ್ಗಿ
ಇಮೇಲ್ - mkpavan2995@gmail.com

ಲೇಖನ 02

# ಶ್ರೀ ಅಯ್ಯಪ್ಪ, ಭದ್ರಕಾಳಿ, ಬೋಟೆ ಕರುಂಬ, ದೇವರಕಾಡು,ದೇವರಪುರ, ಕೊಡಗು ಜಿಲ್ಲೆ, ಕರ್ನಾಟಕ. (ದೇವರ ಕಾಡಿನಲ್ಲಿ ನಡೆಯುವ ಆಚಾರ ವಿಚಾರಗಳು)

ಅಯ್ಯಪ್ಪ ದೇವಕಾಡು, ದೇವರಪುರ ಗ್ರಾಮದಲ್ಲಿದ್ದು ಈ ದೇವಕಾಡನ್ನು ಕೊಡವ ಜನಾಂಗದವರು ನಿರ್ವಹಿಸಿಕೊಂಡು ಹೋಗುತ್ತಿದ್ದಾರೆ. ಈ ದೇವಕಾಡಿನಲ್ಲಿ ವರ್ಷಕ್ಕೊಮ್ಮೆ ಹಬ್ಬವನ್ನು ಆಚರಿಸಲಾಗುವುದು. ಇಲ್ಲಿನ ಬೊಟ್ಟ ಕುರುಬ ಜನಾಂಗದವರ ಪ್ರಾಮುಖ್ಯತೆ ದೇವಕಾಡಿಗಿದೆ. ಅಯ್ಯಪ್ಪ, ಭದ್ರಕಾಳಿ, ಬೋಟೆ ಕರುಂಬ, ದೇವರುಗಳಿಗೆ ಹರಕೆ ಹೊತ್ತ ನಾನಾ ವೇಷಧಾರಿ ಭಕ್ತರು ಊರಿನ ಮನೆ ಮನೆಗಳಿಗೆ ತೆರಳಿ ದೇವರಿಗೆ ಕಾಣಿಕೆ ಬೇಡುವರು.



ಹಿಂದಿನ ಕಾಲದಲ್ಲಿ ಮಳೆ ಜಾಸ್ತಿ ಆಗುತ್ತಿತ್ತು, ಪ್ರಸ್ತುತ ಮಳೆ ಬಹಳ ಕಡಿಮೆ. ಹೊರಗಿನವರು ಬಂದು ದೇವಕಾಡನ್ನು ಆಕ್ರಮಿಸಿಕೊಂಡು ಕಾಡನ್ನು ನಾಶಮಾಡುತ್ತಿದ್ದಾರೆ.

ಪ್ರಸ್ತುತ ಈ ದೇವಕಾಡನ್ನು ಸಂರಕ್ಷಿಸುವುದೇ ಗ್ರಾಮಸ್ಥರ ಆದ್ಯ ಕರ್ತವ್ಯವಾಗಿದೆ. ಈ ದೇವಕಾಡನ್ನು ಉಳಿಸಿ ಬೆಳೆಸುವುದೇ ಊರಿನ ಆಶಯವಾಗಿದೆ. ಹಿಂದೆ ನಿಟ್ವಾ ಯೋಜನೆಯಲ್ಲಿ 35 ಎಕರೆಗೆ ಮರಗಿಡಗಳನ್ನು ನೆಟ್ಟಿರುತ್ತಾರೆ. 1897 ರಲ್ಲಿ 186 ಎಕರೆ ಇದ್ದ ದೇವಕಾಡು ಪ್ರಸ್ತುತ ಈ ದೇವಕಾಡನ್ನು ಪೈಸಾರಿಯೆಂದು ನಮೂದಿಸಿರುತ್ತಾರೆ. ಪ್ರಸ್ತುತ 136 ಎಕರೆ ಇದೆ. ಹಿಂದಿನಿಂದಲೂ ಬಹಳ ಶ್ರದ್ಧಾಭಕ್ತಿಯಿಂದ ಪೂಜೆ ನಡೆಯುತ್ತಿದೆ. ಈ ದೇವಕಾಡಿನಲ್ಲಿ ಬಹಳ ಶಕ್ತಿಯುತವಾಗಿರುವಂತಹ ಭದ್ರಕಾಳಿ, ಐಯ್ಯಪ್ಪ, ಬೇಟೆಕಾರುಂಬ ಎಂದು ಮೂರು ದೇವರುಗಳಿದ್ದು, ಈ ದೇವಕಾಡಿಗೆ ಅಪಾರ ಶಕ್ತಿಯಿದೆ.

ಕೊಡವ ರಾಜನ ಆಡಳಿತದಲ್ಲಿ ಬಂದ ದೇವಕಾಡು ಇದಾಗಿದೆ. ಟಿಪ್ಪು ಕೆಲವು ವಸ್ತುಗಳನ್ನು ಕೆರೆಗೆ ಹಾಕಿರುತ್ತಾರೆಂದು ತಿಳಿದುಬಂದಿದೆ. ಬ್ರಿಟೀಷರ ಕಾಲದಲ್ಲಿ ಕಾಡನ್ನು ದೇವಕಾಡು ಎಂದು ಪರಿವರ್ತಿಸಲಾಗಿದೆ. ಈ ದೇವಕಾಡು ಒಂದು ಕಾಲದಲ್ಲಿ ಸರ್ಕಾರದ ಆಳ್ವಿಕೆಯಲ್ಲಿತ್ತು. ಅದಾದ ಮೇಲೆ ಅರಣ್ಯ ಅಧಿಕಾರಿಗಳ ಪಾಲಾಗಿತ್ತು. ಈಗಲೂ ರೇಂಜ್ ಫಾರೆಸ್ಟ್ ಅಧಿಕಾರಿಗಳ ಅಡಿಯಲ್ಲಿ ಇದೆ. ಕಾದ್ಯಾರ್ 8 ಕ್ಕೆ ಇಲ್ಲಿ ಹಬ್ಬ ನಡೆಯುತ್ತದೆ.

ಈ ಹಬ್ಬಕ್ಕೆ ಬೋಡು/ಬೇಡು ಹಬ್ಬವೆಂದೇ ಕರೆಯುತ್ತಾರೆ. ಹಿಂದೆ ಬೊಳ್ಳಜಿರ ಕುಟುಂಬದವರು ಈ ದೇವಕಾಡಿನ ನಿರ್ವಹಣೆಯನ್ನು ನಡೆಸುತ್ತಿದ್ದರು, ನಂತರ ಸಣ್ಣುವಂಡ ಕುಟುಂಬಸ್ಥರು ನಿರ್ವಹಿಸುತ್ತಿದ್ದಾರೆ.

ತಲೆತಲಾಂತರಗಳಿಂದ ಆಚರಿಸಿಕೊಂಡು ಬರುತ್ತಿರುವ ಈ ವಿಶೇಷ ಹಬ್ಬದ ಉದ್ದೇಶ ಪ್ರತೀತಿಯ ಮೂಲಕ ತಕ್ಕ ಮುಖ್ಯಸ್ಥರಾದ ಸಣ್ಣುವಂಡ ಕುಟುಂಬಸ್ಥರು ಹಾಗೂ ಊರಿನ ಹಿರಿಯರು ಹೇಳುವಂತೆ ಕೊಡಗಿನಲ್ಲಿ ಇರುವ ಕಾಡುಗಳಲ್ಲಿ ಕೆಲವು ಕಾಡುಗಳನ್ನು ಹಿಂದಿನಿಂದಲೂ 'ದೇವರ ಕಾಡು' ಎಂದು ಘೋಷಿಸುತ್ತಾ ದಟ್ಟ ಮರಗಳಿಂದ ಕಾಡನ್ನು ಸಂರಕ್ಷಿಸುವ ನಿಟ್ಟಿನಲ್ಲಿ ಅಯ್ಯಪ್ಪ, ಭದ್ರಕಾಳಿ ಮತ್ತು ಬೋಟೆ ಕರುಂಬ ದೇವರನ್ನು ಪೂಜಿಸುತ್ತಾ ಕಾಡಿನ ಬಗ್ಗೆ ಪ್ರೀತಿ ಮತ್ತು ಕಾಡಿನ ಬೆಲೆಬಾಳುವ ಮರ ಸಂಪತ್ತುಗಳನ್ನು ನಾಶಪಡಿಸದೆ ಸಂರಕ್ಷಿಸುವ ಕಾಳಜಿಯಿಂದ ಊರಿನವರು ಆಯಾಯ ದೇವರಕಾಡುಗಳಲ್ಲಿ ಬೋಡು ಹಬ್ಬವನ್ನು ಆಚರಿಸುತ್ತಾರೆ.

ಹಬ್ಬವನ್ನು ಮುಖ್ಯವಾಗಿ ಸಣ್ಣುವಂಡ ಕುಟುಂಬಸ್ಥರು ತಕ್ಕ ಮುಖ್ಯಸ್ಥರಾಗಿ ನಡೆಸುತ್ತಾ ಬರುತ್ತಿದ್ದಾರೆ. ಪ್ರಸಕ್ತ ಸಣ್ಣುವಂಡ ಕುಶಾಲಪ್ಪ ಮುಖ್ಯ ತಕ್ಕರಾಗಿರುತ್ತಾರೆ, ಸಣ್ಣುವಂಡ ರಜನ್ ತಿಮ್ಮಯ್ಯ, ಅಜನಿತಂಡ ತಿಮಯ್ಯ ಅಚ್ಚಯ್ಯ ದೇವಸ್ಥಾನ ಸಮಿತಿ ಮುಖ್ಯಸ್ಥರಾಗಿ ಇತರರ ಸಹಕಾರದಿಂದ ದೇವರ ಕಾರ್ಯ ಹಾಗೂ ದೇವಕಾಡಿನ ರಕ್ಷಣೆ ನಿರ್ವಹಿಸುತ್ತಿದ್ದಾರೆ.

ಸಣ್ಣುವಂಡ ಕುಟುಂಬಸ್ಥರಿಗೆ ಊರಿನ ಇತರ ಕುಟುಂಬಸ್ಥರಾದ ಕಳ್ಳಿಚಂಡ, ಮನೆಯಪಂಡ, ಚೆಕ್ಕೇರ, ಅಜ್ಜಿನಿಕಂಡ, ಕಂಜಿತಂಡ ಸಹಕಾರ ನೀಡುತ್ತಿದ್ದು, ಊರಿನ ಸಹಬಾಳ್ವೆಗೆ ಸಾಕ್ಷಿಯಾಗಿರುತ್ತದೆ. ಹಾಗೆಯೇ ಕೊಡಗಿನ ಮೂಲ ನಿವಾಸಿಗಳಾದ ಬೊಟ್ಟ ಕುರುಬರು ತರಗು ವಕ್ಕಾ ಎಂಬ ಹೆಗ್ಗಳಿಕೆಯೊಂದಿಗೆ ಬೋಡು ಹಬ್ಬದ ಆಚರಣೆಯಲ್ಲಿ ತಮ್ಮನ್ನು ಗುರತಿಸಿಕೊಂಡಿರುತ್ತಾರೆ. 'ತರಗು' ಎಂದರೆ ಗುಡಿಸಲು ಉಪಯೋಗಿಸುವ ಕುರುಚಲು ಗಿಡ. ಹಬ್ಬಕ್ಕೆ ಮುನ್ನ ದೇವಸ್ಥಾನದ ಆವರಣವನ್ನು ಶುಚಿಗೊಳಿಸುವುದು ಮತ್ತು ಬಿದಿರಿನಿಂದ ತಯಾರಿಸುವ ಕುದುರೆಗೆ ಶೃಂಗಾರ ಮಾಡುವುದು ತರಗು ವಕ್ಕಾ ಬೊಟ್ಟ ಕುರುಬರ ಹಬ್ಬದ ಸೇವೆಯಾಗಿದೆ.



ಹಬ್ಬವನ್ನು ಎರಡು ದಿನ ಆಚರಿಸಲಾಗುತ್ತದೆ. ಮೊದಲನೆ ದಿನ ಪಟ್ಟಣಿ, ಎರಡನೆ ದಿನ ಕುದುರೆ ತೆಗೆಯುವುದು. ಆ ದಿನ ಬೆಳಿಗ್ಗೆಯಿಂದ ಹಬ್ಬದ ಕಟ್ಟುಪಾಡಿಗೆ ಒಳಪಡುವ ಊರಿನವರು ಅನ್ನವನ್ನು ಬಿಟ್ಟು ಫಲಾಹಾರ ಸೇವಿಸುತ್ತಾರೆ.

ಹಾಗೆ ಪಟ್ಟಣಿಗೆ ಪೂರ್ವ ಸರಿಯಾಗಿ ಎಂಟು ದಿನದಿಂದ ಅನ್ವಯವಾಗುವಂತೆ ಪ್ರಾಣಿ ಹಕ್ಕಿಗಳನ್ನು ಸಂಹಾರ ಮಾಡದೆ ಮಾಂಸಾಹಾರ ತ್ಯಜಿಸಿ ಸಸ್ಯಾಹಾರಿಗಳಾಗಿ ದೇವರ ಕಟ್ಟು ಪಾಲಿಸುತ್ತಾರೆ. ಆ ದಿನ ಮಧ್ಯಾಹ್ನ ಊರಿನವರು ದೇವಸ್ಥಾನದಲ್ಲಿ ಸೇರಿ ಪೂಜೆಯ ಬಳಿಕ ದೇವಸ್ಥಾನ ಸನಿಹವಿರುವ ಅಂಬಲ (ದೇವರ ಪರಿಕರಗಳನ್ನು ಇಡುವ ಸ್ಥಳ ) ತೆರಳಿ ಹಬ್ಬಕ್ಕೆ ಉಪಯೋಗಿಸುವ ದೈವಿಕ ವಸ್ತುಗಳನ್ನು ಅಂದರೆ ಕಡತಲೆ, ತೂರೆಕೋಲು, ಬೆಳ್ಳಿಯ ಹರಕೆ ವಸ್ತುಗಳಾದ ಕುದುರೆ, ನಾಯಿ, ಮಗು, ತೊಟ್ಟಿಲು, ಹಸು, ಕರುಗಳು, ಶೂಲ, ಕಾಳು, ಕೈ, ಮೂಗು, ಕಿವಿ, ಬೆರಳು, ಕಣ್ಣು (ಶರೀರಕ್ಕೆ ಅಥವಾ ಸಾಕು ಪ್ರಾಣಿಗಳಿಗೆ ಅನಾರೋಗ್ಯವಾದಾಗ ದೇವರನ್ನು ಬೇಡಿ ಸರಿಪಡಿಸಿದ್ದಲ್ಲಿ ಹರಕೆ ಕೊಡುವುದಾಗಿ ಪ್ರಾರ್ಥಿಸಿಕೊಳ್ಳುತ್ತಾರೆ) ಮೊಗ (ದೇವರ ಮುಖವಾಡ) ಇತ್ಯಾದಿಗಳನ್ನು ಶುದ್ದೀಕರಿಸಿ ಅಯ್ಯಪ್ಪ ದೇವಸ್ಥಾನಕ್ಕೆ ತೆರಳಿ ಪೂಜೆ ಸಲ್ಲಿಸುತ್ತಾರೆ. ಬಳಿಕ ಬೇಟೆ ಕರುಂಬ ಸ್ಥಾನಕ್ಕೆ ಬೇಟೆ ನಾಯಿ (ಮಣ್ಣಿನಿಂದ ಮಾಡಿದ)ಯ ಹರಕೆ ಸಲ್ಲಿಸಿ ಭದ್ರಕಾಳಿ ದೇವಸ್ಥಾನಕ್ಕೆ ವಾಲಗದೊಂದಿಗೆ ತೆರಳುತ್ತಾರೆ.

ಅಲ್ಲಿ ಭದ್ರಕಾಳಿ ದೇವರನ್ನು ನೆನೆದು ಪೂಜೆ ಸಲ್ಲಿಸಿ ಬೋಟೆ ಕರುಂಬ ದೇವರ ಪ್ರೀತಿಗೆ ಪಾತ್ರವಾದ ನಾಯಿ (ಮಣ್ಣಿನಿಂದ ಕುಂಬಾರ ತಯಾರಿಸಿದ) ಅರ್ಪಿಸಿ, ಹಿಂದಿನ ಕಾಲದಲ್ಲಿ ಬೇಟೆಗೆ ತೆರಳುವಾಗ ಬೇಟೆಯಲ್ಲಿ ಸಾಕು ನಾಯಿಯು ಕಾಡು ಪ್ರಾಣಿಗಳ ಇರುವಿಕೆಯನ್ನು ಗ್ರಹಿಸಿ ಬೇಟೆಗಾರನಿಗೆ ಸಹಾಯ ಮಾಡುತ್ತಿತ್ತು ಎಂಬುದರ ಪ್ರತೀತಿ ಇದೆ. ಆದ್ದರಿಂದ ಬೇಟೆಗಾರರಿಗೆ ಶಕ್ತಿಯ ಪ್ರತೀತಿಯಾಗಿರುವ ಬೇಟೆ ಕರುಂಬ ದೇವರಿಗೆ ನಾಯಿಯನ್ನು ಅರ್ಪಿಸಲಾಗುತ್ತದೆ.

ಹರಕೆ ಹೊತ್ತ ಯುವಕರಲ್ಲಿ ಆದ್ಯತೆ ಮೇರೆಗೆ ಕುದುರೆತೆಗೆಯುವುದಕ್ಕೆ ಇಬ್ಬರನ್ನು ಆರಿಸಿ (ದೇವರ ಅನುವಾದ ಪಡೆದ ಇಬ್ಬರು) ಪುನಃ ಅಯ್ಯಪ್ಪ ದೇವಸ್ಥಾನಕ್ಕೆ ಬಂದು, ಹಣ್ಣು ಕಾಯಿ ಪಡೆದು, ದೇವಸ್ಥಾನದಲ್ಲಿ ಊಟಮಾಡಿ (ಭಕ್ತರ ಹರಕೆ ಧಾರೆಯಿಂದ ತಯಾರಿಸಿದ ಅಕ್ಕಿ, ಧಾನ್ಯ, ತರಕಾರಿಗಳಿಂದ) ಅಂದರೆ ಪಟ್ಟಣಿಗೆ ಎಂಟು ದಿನ ಪೂರ್ವ ತ್ಯಜಿಸಿದ ಮಾಂಸಾಹಾರವನ್ನು ಈ ಘಳಿಗೆಯಿಂದ ಪುನಃ ಸ್ವಾಹಾ ಮಾಡಬಹುದು ಎಂದು ಊರಿಗೆ ತಿಳಿಹೇಳುವ ಪ್ರತೀತಿ. (ಈ ಘಳಿಗೆಯಿಂದ ಬೇಟೆ ಮಾಡಬಹುದು ಎಂಬ ತಿಳುವಳಿಕೆ). “ಊರೇ ನಾಡೇ ತಕ್ಕರೆ, ಬಿಲ್ ಬುಡ್‌ಡಾ” ಎಂದು ಮೂರು ಭಾರಿ ಕೇಳಿ ಬಿದಿರಿನಿಂದ ಬಾಣವನ್ನು ಬಿಡುತ್ತಾರೆ. ಆ ಬಳಿಕ ಭಕ್ತರು ಮನೆಗಳಿಗೆ ತೆರಳಿ ವಿಶ್ರಾಂತಿ ಪಡೆಯುತ್ತಾರೆ.

ಮರುದಿನ ಬೆಳಿಗ್ಗೆಯಿಂದಲೇ ನಾನಾ ವೇಷಧಾರಿ ಭಕ್ತರು ಊರಿನ ಮನೆ ಮನೆ ತೆರಳಿ ಬೇಡುತ್ತಾ ದೇವರಿಗೆ ಕಾಣಿಕೆ ಪಡೆಯುತ್ತಾರೆ. ಹಿಂದಿನ ಪದ್ಧತಿಯನ್ವಯ ಊರಿನೊಳಗೆ ವಾಸಿಸುವ ಹರಕೆ ಹೊತ್ತ ಭಕ್ತರು ಮತ್ತು ಹೊರಗಿರುವ ಜೇನು ಕುರುಬರು ಮಾತ್ರ ವೇಷಧಾರಿಗಳಾಗಿ ಅಯ್ಯಪ್ಪ, ಭದ್ರಕಾಳಿ, ಬೇಟೆ ಕರುಂಬ ದೇವರನ್ನು ಹೊಗಳುತ್ತಾ ಕಾಣಿಕೆ ಬೇಡುತ್ತಾರೆ. “ಅಯ್ಯಪ್ಪ ದೇವರ ಮಕ್ಕಳು ನಾವು ದೂರಿ, ದೂರಿ, ಭದ್ರಕಾಳಿಯಮ್ಮನ ಮಕ್ಕಳು ನಾವು ದೂರಿ, ದೂರಿ, ನಾವು ಕಾಡು ಕುರುಬರ ಮಕ್ಕಳು ದೂರಿ, ದೂರಿ, ಕಾಣಿಕೆ ಗೀಣಿಕೆ ಕೇಳುವೆವು ದೂರಿ, ದೂರಿ” ಎಂದು ದೇವರನ್ನು ಹೊಗಳುತ್ತಾ ಹಾಡುತ್ತಾರೆ.



(ಆದರೆ ನಿಷ್ಠೆಯಿಲ್ಲದ ಮೂಡರಿಗೆ ಮೋಜಿನ, ಹಣ ಕೀಳುವ, ಹೆಂಗಸು-ಗಂಡಸರನ್ನು ಅವಮಾನಿಸಿ ಬೈಯ್ಯುವ ಹಿಡಿತವಿಲ್ಲದ ನಾಲಿಗೆಯ ಹೆಂಡ ಸರಾಯಿ ಕುಡಿತದ ಹಾಡಾಗಿ ಪರಿಣಮಿಸಿರುವುದು ವಿಪರ್ಯಾಸವೇ ಸರಿ.) ಬೇಡುವ ಹಬ್ಬವನ್ನು ಕುಂಡೆ ಹಬ್ಬವೆಂದು ಕಾಣಿಕೆ ಗೀಣಿಕೆ ಕೇಳುವೆವು ಎಂಬುದನ್ನು ಕೇಳುವುದು ಎಂದು ಅಸಹ್ಯವಾಗಿ ಹಾಡುತ್ತಾ ಬೇಡುವ ಹಬ್ಬಕ್ಕೆ ಕಳಂಕ ಪ್ರಾಯವಾಗಿರುತ್ತದೆ.

ಮಧ್ಯಾಹ್ನ ಎಲ್ಲಾ ವೇಷಧಾರಿ ಭಕ್ತರು ಅಯ್ಯಪ್ಪ, ಭದ್ರಕಾಳಿ, ಬೇಟೆ ಕರುಂಬ ದೇವಸ್ಥಾನಕ್ಕೆ ಬಂದು ಆವರಣದಲ್ಲಿ ದೇವರನ್ನು ಹೊಗಳುತ್ತಾ ವಾಲಗಕ್ಕೆ ಕುಣಿದು ದೇವರಿಗೆ ಹರಕೆ ಪೂಜೆ ಸಲ್ಲಿಸುತ್ತಾರೆ. ಸರಿ ಸುಮಾರು ಎರಡು ಗಂಟೆಗೆ ಕುದುರೆ ತೆಗೆಯಲು ಹರಕೆ ಹೊತ್ತ ಅನುವಾದ ಪಡೆದ ಇಬ್ಬರು ಯುವ ಭಕ್ತರು ಮಂಡೆ ತುಣಿ ಹಾಕಿ, ತರಗು ವಕ್ಕರಾದ ಬೇಟೆ ಕುರುಬರು ಶೃಂಗರಿಸಿದ ಬಿದಿರಿನ ಕುದುರೆಯನ್ನು, ಊರಿನ ತಕ್ಕ ಮುಖ್ಯಸ್ಥರು, ಹಿರಿಯರ ಆಶೀರ್ವಾದದೊಂದಿಗೆ ಅಂಬಲದಲ್ಲಿ ಪೂಜೆ ಸಲ್ಲಿಸಿ ದೇವರನ್ನು ನೆನೆದು ಭಂಡಾರ ಪೆಟ್ಟಿಗೆ, ಪಣಿಕರ ತೆಗೆಯುವ ಮೊಗದೊಂದಿಗೆ ಅಯ್ಯಪ್ಪ ದೇವಸ್ಥಾನಕ್ಕೆ ಆಗಮಿಸುತ್ತಾರೆ.

ಭದ್ರಕಾಳಿ ದೇವರ ಮೊಗಕ್ಕೆ ಮತ್ತು ಕುದುರೆಗೆ ಭಕ್ತರು ಪೂಜೆ ಸಲ್ಲಿಸಿದ ಬಳಿಕ, ಸುಮಾರು ನಾಲ್ಕು ಗಂಟೆಗೆ, ಮೊಗದೊಂದಿಗೆ ವಾಲಗ ಸಹಿತ ದೇವರ ಕಾಡಿನಲ್ಲಿರುವ ಭದ್ರಕಾಳಿ ದೇವಸ್ಥಾನಕ್ಕೆ ಪೂಜಾರಿ, ತಕ್ಕರು, ಊರಿನ ಹಿರಿಯರು ಹಾಗೂ ಭಕ್ತ ವೇಷಧಾರಿಗಳೊಂದಿಗೆ ಭದ್ರಕಾಳಿ ದೇವಸ್ಥಾನಕ್ಕೆ (ಗಂಡಸರಿಗೆ ಮಾತ್ರ ಅವಕಾಶವಿದೆ) ತೆರಳುತ್ತಾರೆ. ಮಾರ್ಗ ಮಧ್ಯ ಕಳೆದ ಎಂಟು ದಿನದಲ್ಲಿ ಪ್ರಾಣಿ, ಪಕ್ಷಿಗಳನ್ನು ತಿಳಿದೋ ತಿಳಿಯದೆಯೋ ಕೊಂದಿದ್ದರೆ ಹಾಗೂ ಮಾಂಸಾಹಾರ ಮಾಡಿ ದೇವರ ಕಟ್ಟುಪಾಡನ್ನು ಮುರಿದಿದ್ದರೆ ಅಂತ ಭಕ್ತರು ದೇವರನ್ನು ಪ್ರಾರ್ಥಿಸಿ, ಶೂಲ ಕಟ್ಟೆ ಪ್ರವೇಶಿಸಿ ಕ್ಷಮೆ ಬೇಡಿ ತಪ್ಪು ಹಣ ಸಲ್ಲಿಸಿ ಭದ್ರಕಾಳಿ ದೇವಸ್ಥಾನಕ್ಕೆ ತೆರಳುತ್ತಾರೆ.

ಪ್ರಸ್ತುತ ಇಲ್ಲಿನ ಕುಟುಂಬಸ್ಥರು ದೇವಕಾಡನ್ನು ಬಹಳ ಒಗ್ಗಟ್ಟಿನಿಂದ ಸಂರಕ್ಷಿಸಿಕೊಂಡು ಹೋಗುತ್ತಿದ್ದಾರೆ. ಇಲ್ಲಿನ ದೇವಕಾಡಿನಲ್ಲಿ ವಿಶೇಷವಾದ ಹಬ್ಬದ ಆಚರಣೆ ಭಿನ್ನವಾಗಿದೆ. ದೇವಕಾಡಿನ ಸಂರಕ್ಷಣೆ ಇಲ್ಲಿನ ಗ್ರಾಮಸ್ಥರ ಆದ್ಯ ಕರ್ತವ್ಯವಾಗಿದೆ.

**ವಿದ್ಯಾ ಜಗದೀಶ್ ಪುತ್ತಾಮನೆ**
**ಸಂಶೋಧನಾ ಲೇಖಕಿ ಮತ್ತು ಗಾಯಕಿ**
**ಕಿರುಗೂರು, ಪೊನ್ನಂಪೇಟೆ ಕೊಡಗು**
**ಇಮೇಲ್:vidyavocal5@gmail.com**

ಲೇಖನ 03

# ಹಾವಿನ ಹೆಜ್ಜೆ

ಹಾವುಗಳು ಸರೀಸೃಪಗಳು, ಹುರುಪೆಗಳಿಂದ ಕೂಡಿದ ಚರ್ಮವನ್ನು ಹೊಂದಿರುವ ಇವು ತೆವಳುತ್ತಾ ನಡೆಯುತ್ತವೆ. ಇವು ಶೀತರಕ್ತ ಪ್ರಾಣಿಗಳು, ಇವುಗಳು ಮಾಂಸಾಹಾರಿ ಜೀವಿಗಳು. ಹಾವುಗಳು ಡೈನೋಸಾರಸ್ಗಳ ಕಾಲದಿಂದಲೂ ಭೂಮಿಯ ಮೇಲೆ ಇವೆ. ಪ್ರಪಂಚದಲ್ಲಿ 4000ಕ್ಕೂ ಹೆಚ್ಚು ಪ್ರಭೇದದ ಹಾವುಗಳಿದ್ದು, ಅದರಲ್ಲಿ ಕೇವಲ 600 ಪ್ರಭೇದದ ಹಾವುಗಳು ವಿಷಕಾರಿಯಾಗಿದ್ದು, 200 ಪ್ರಭೇದದ ಹಾವುಗಳ ವಿಷವನ್ನು ಔಷಧಿ ತಯಾರಿಸಲು ಬಳಸುತ್ತಾರೆ.

ಭಾರತದಲ್ಲಿ 300ಕ್ಕೂ ಹೆಚ್ಚು ಪ್ರಭೇದದ ಹಾವುಗಳಿವೆ. ಕಾಳಿಂಗಸರ್ಪ, ನಾಗರಹಾವು, ಮಂಡಲದ ಹಾವು, ಕಟ್ಟುಹಾವು, ರಕ್ತಮಂಡಲ ಮುಂತಾದ ಹಾವುಗಳು ವಿಷಕಾರಿಯಾಗಿವೆ. ನಾಗರಹಾವು ಸಾಧಾರಣವಾಗಿ ಭಾರತದ್ಯಾಂತ ಕಾಣ ಸಿಗುತ್ತದೆ. ಇವುಗಳು ಎಲಾಫಿಡೆ ಕುಟುಂಬಕ್ಕೆ ಸೇರಿದ್ದು, ಇವುಗಳಿಗೆ 'ನಾಜ' ಎಂಬ ವೈಜ್ಞಾನಿಕ ಹೆಸರಿದೆ. ಸಾಮಾನ್ಯವಾಗಿ ನಾಗರಹಾವಿನ ಹೆಡೆಯ ಮೇಲೆ ಮೂಡಿರುವ 'ವಿ' ಆಕಾರವನ್ನು ಹಾವಿನ ಗುರುತಿಸುವಿಕೆಯಲ್ಲಿ 'ಕನ್ನಡಕ' ಎಂದು ಕರೆಯುತ್ತಾರೆ. ಭಾರತದ ಈಶಾನ್ಯ ರಾಜ್ಯಗಳಲ್ಲಿ ಕಂಡುಬರುವ ನಾಗರಹಾವಿನ ಹೆಡೆಯ ಮೇಲೆ ಸೊನ್ನೆಯಾಕಾರದಲ್ಲಿರುತ್ತದೆ. ಇದನ್ನು ಏಕ ಕನ್ನಡಕದ ಹಾವು 'ಮೋನೋಕ್ಲೆಡ್ ಕೋಬ್ರ' (ನಾಜ ಕೌತಿಯಾ) ಎಂದು ಕರೆಯುತ್ತಾರೆ. ಅಂಡಮಾನ್ ದ್ವೀಪಗಳಲ್ಲಿ ಕಂಡುಬರುವ ಅಂಡಮಾನ್ ಕೋಬ್ರ (ನಾಜ ಸ್ಯಾಜಿಟ್ಟಿಫೆರ) ಮತ್ತು ಆಗ್ನೇಯ ಭಾರತದಲ್ಲಿ ಕಂಡುಬರುವ ಸೆಂಟ್ರಲ್ ಏಷಿಯನ್ ಕೋಬ್ರ (ನಾಜ ಅಕ್ಸಿಯಾನ) ಗಳನ್ನೂ ಕೂಡ ನಾಗರ ಹಾವುಗಳೆಂದು ಕರೆಯುತ್ತಾರೆ. ಜೊತೆಗೆ ಮಿಡಿನಾಗರ, ಗೋಧಿನಾಗರ, ಕನ್ನಡಕವಿಲ್ಲದ ನಾಗರ, ಶ್ವೇತನಾಗರ ಮುಂತಾದವುಗಳಿವೆ.



ಚಿತ್ರ ಕೃಪೆ: ಅಶೋಕ್ N

ನಾಗರಹಾವು ರೇಗಿದಾಗ ತನ್ನ ದೇಹವನ್ನು ಮೇಲಕ್ಕೆತ್ತಿ, ಹೆಡೆಯನ್ನು ಅಗಲಿಸಿ ಬುಸುಗುಡುತ್ತ ತನ್ನ ಎದುರಾಳಿಯನ್ನು ಕಚ್ಚುತ್ತದೆ. ಕಡಿತಕ್ಕೊಳಗಾದ ಜಾಗ ಕೆಂಪಗಾಗುತ್ತದೆ, ಉರಿ ಉಂಟಾಗುತ್ತದೆ. ಕಡಿಸಿಕೊಂಡ ವ್ಯಕ್ತಿಗೆ ನಿದ್ರೆ ಬಂದಂತಾಗುತ್ತದೆ. ೩೦-೫೦ ನಿಮಿಷಗಳಲ್ಲಿ ಬಾಯಿಂದ ಜೊಲ್ಲು ಯಥೇಚ್ಛವಾಗಿ ಉತ್ಪತ್ತಿಯಾಗುವುದು. ನಾಲಗೆ ಉಬ್ಬಿಕೊಳ್ಳುವುದು. ನಿಧಾನವಾಗಿ ಉಸಿರಾಟವೂ, ಹೃದಯ ಬಡಿತವೂ ನಿಂತು ಹೋಗುವವು. ವ್ಯಕ್ತಿ ಹಾವಿನ ಕಡಿತಕ್ಕೆ ಒಳಗಾದ ತಕ್ಷಣ ಪ್ರತಿವಿಷವನ್ನು ಕೊಡುವುದರಿಂದ ಸಾವನ್ನು ತಪ್ಪಿಸಬಹುದು. ಹಾವಿನ ಕಡಿತಕ್ಕೆ ಹಾವಿನ ವಿಷವೇ ಮದ್ದು ಎಂಬುದು ಸತ್ಯ. ಹಾವುಗಳನ್ನು ಕಂಡಕೂಡಲೇ ವಿಷಜಂತುವೆಂದು ಕೊಲ್ಲುವುದು ಸರಿಯಲ್ಲ. ಹಾವಿನ ಕಡತಕ್ಕೆ ಹಾವಿನ ವಿಷದಿಂದ ಮಾಡುವ ಪ್ರತಿವಿಷವೆ ಔಷಧಿ.

ಹಾವುಗಳು ಅಳಿವಿನಂಚಿನಲ್ಲಿರುವ ಜೀವಿಗಳು. ನಿಸರ್ಗದ ಸರಪಳಿಯನ್ನು ಕಾಯಲು ಹಾವುಗಳ ರಕ್ಷಣೆ ಅತ್ಯಗತ್ಯ.

**ಹಾವಿನ ದ್ವೇಷ ಹನ್ನೆರಡು ವರುಷ...**

ಹಾವುಗಳು ಹಗೆಸಾದಿಸುತ್ತವೆ, ಸೇಡು ತೀರಿಸಿಕೊಳ್ಳುತ್ತವೆ ಎಂದೆಲ್ಲಾ ಸಿನಿಮಾಗಳಲ್ಲಿ ನೋಡಿರಬಹುದು, ಹಾವನ್ನು ಸಾಯಿಸುವ ಸಮಯದಲ್ಲಿ ಅದು ತಪ್ಪಿಸಿಕೊಂಡು ಹೋದರೆ, ಸಾಯಿಸಲು ಬಂದವರ ಮೇಲೆ ಸೇಡುತೀರಿಸಿಕೊಳ್ಳುತ್ತದೆ ಎಂದೆಲ್ಲಾ ಕೇಳಿದ್ದೇವೆ. ಆದರೆ ಸತ್ಯವೇನೆಂದರೆ ಹಾವಿಗೆ ಜ್ಞಾಪಕಶಕ್ತಿ ಇರುವುದಿಲ್ಲ. ಅವುಗಳಿಗೆ ಕಣ್ಣು ಸರಿಯಾಗಿ ಕಾಣುವುದಿಲ್ಲ. ಹಾವುಗಳ ಮೆದುಳಿನಲ್ಲಿ ದೊಡ್ಡ ಮೆದುಳು (ಸೆರಿಬ್ರಮ್) ಇರುವುದಿಲ್ಲ, ಇದರಿಂದ ಹಾವುಗಳು ಹೆಚ್ಚು ನೆನಪಿಟ್ಟುಕೊಳ್ಳಲು ಸಾಧ್ಯವಿಲ್ಲ. ಹಾವುಗಳು ಯಾರಮೇಲು ದ್ವೇಷ ಸಾದಿಸುವುದಿಲ್ಲ.

ಆದರೆ ಸರ್ಪಗಳನ್ನು ಉಳಿಸುವ ಸಲುವಾಗಿ ಈ ಸುಳ್ಳು ಹುಟ್ಟಿಕೊಂಡಿತ್ತು. ಹಾವುಗಳು ರೈತನ ಮಿತ್ರ. ಹಾವುಗಳು ರೈತರ ಬೆಳೆಯನ್ನು ಇಲಿಗಳಿಂದ ರಕ್ಷಿಸುತ್ತವೆ. ಒಂದು ನಾಗರಹಾವು ತನ್ನ ಜೀವಿತಾವಧಿಯಲ್ಲಿ ಸುಮಾರು 800 ಇಲಿಗಳನ್ನು ತಿನ್ನುತ್ತದೆ. ಇದರಿಂದ ಪ್ರತಿವರ್ಷ 18% ಕ್ಕೂ ಹೆಚ್ಚು ಬೆಳೆಗಳನ್ನು ಉಳಿಸುತ್ತದೆ. ಹಾವುಗಳನ್ನು ಕೊಲ್ಲುವುದರಿಂದ ಇಲಿಗಳ ಕಾಟ ಹೆಚ್ಚಾಗುತ್ತದೆ. ಆದ್ದರಿಂದ ಯಾರು ಹಾವುಗಳನ್ನು ಕೊಲ್ಲಬಾರದೆಂದು ಸೇಡಿನ ಕತೆಗಳು ಹುಟ್ಟಿಕೊಂಡವು. ಅದಕ್ಕಾಗಿಯೇ ಹಾವುಗಳನ್ನು ನಾವು ಪೂಜ್ಯನೀಯ ಸ್ಥಾನದಲ್ಲಿ ನೋಡುತ್ತೇವೆ. ಪ್ರತಿವರ್ಷವು ನಾಗರಪಂಚಮಿ ಆಚರಿಸುತ್ತೇವೆ.


ಚಿತ್ರ ಕೃಪೆ: ಅಶೋಕ್ N

**ಹಾವಿಗೆ ಹಾಲೆರೆದೇನು ಫಲ...?**

ನಾಗರಪಂಚಮಿಯ ಆಚರಣೆಯ ಹಿಂದೆ ಬಹಳಷ್ಟು ಕಥೆಗಳಿವೆ. ಶ್ರಾವಣ ಮಾಸದ ಶುಕ್ಲಪಕ್ಷದ ಪಂಚಮಿಯಂದು ದೇಶದಲ್ಲೆಲ್ಲಾಕಡೆ ನಾಗರಪಂಚಮಿಯನ್ನು ಆಚರಿಸುತ್ತಾರೆ. ಸಾಮಾನ್ಯವಾಗಿ ಹುತ್ತಕ್ಕೆ ಹಾಲೆರೆದು ಪೂಜಿಸುತ್ತಾರೆ. ಹಾವುಗಳು ಹಾಲು ಕುಡಿಯುತ್ತವೆ ಎಂಬುದು ನಮ್ಮ ದೇಶದಲ್ಲಿರುವ ದೊಡ್ಡ ಮೂಡನಂಬಿಕೆ. ವೈಜ್ಞಾನಿಕವಾಗಿ ಯೋಚಿಸುವುದಾದರೆ ಹಾಲು ಹಾವಿನ ಆಹಾರವಲ್ಲ. ಹಾಲು ಕುಡಿಯುವ ಜೀವಿಗಳನ್ನು ಸಸ್ತನಿಗಳು ಎಂದು ಕರೆಯುತ್ತಾರೆ. ಆದರೆ ಹಾವುಗಳು ಸರೀಸೃಪಗಳು, ಹಾವುಗಳು ಹಾಲು ಕುಡಿಯುವುದಿಲ್ಲ, ಒಂದುವೇಳೆ ಕುಡಿದರು ಅದು ಜೀರ್ಣವಾಗುವುದಿಲ್ಲ. ಒಂದುವೇಳೆ ಹಾವಿನ ಬಾಯಲ್ಲಿರುವ ಶ್ವಾಸನಾಳದ ದ್ವಾರ (ಗ್ಲಾಟಿಸ್) ದ ಮೂಲಕ ಹಾಲು ಹೋದರೆ ನೇರವಾಗಿ ಶ್ವಾಸಕೋಶ ಸೇರುತ್ತದೆ. ಇದರಿಂದ ಶ್ವಾಸಕೋಶದ ಉರಿಯೂತ (ನ್ಯೂಮೋನಿಯಾ) ಬಂದು ಹಾವು ಸತ್ತುಹೋಗುತ್ತದೆ.

ಹಾಲುಕುಡಿದ ಹಾವು ಬದುಕುವುದು ಕಷ್ಟ, ಆದರೆ ಕೆಲವೊಂದು ಸಿನಿಮಾಗಳಲ್ಲಿ ಹಾವುಗಳು ಹಾಲುಕುಡಿಯುವುದನ್ನು ನೀವು ನೋಡಿರಬಹುದು. ಅದು ಹೇಗೆ ಸಾಧ್ಯವೆಂದರೆ, ಹಾವಾಡಿಗರು ಹಾವನ್ನು ಹಿಡಿದು ತಿಂಗಳುಗಳ ಕಾಲ ಉಪವಾಸ ಕೆಡವುತ್ತಾರೆ. ಕೆಲವು ತಿಂಗಳ ಬಳಿಕ ಹಾವಿನ ಮುಂದೆ ಹಾಲನ್ನು ಇಡುತ್ತಾರೆ. ಬಹಳ ದಿನಗಳಿಂದ ಹಸಿದಿದ್ದ ಹಾವು ಹಾಲು ಸಿಕ್ಕ ತಕ್ಷಣ ಕುಡಿದುಬಿಡುತ್ತದೆ. ಆದರೆ ಹೆಚ್ಚು ಕಾಲ ಬದುಕುವುದಿಲ್ಲ.


ಚಿತ್ರ ಕೃಪೆ: ಅಶೋಕ್ N

ಹಾಗಾದರೆ ಹುತ್ತಕ್ಕೆ ಏಕೆ ಹಾಲೆರೆಯುತ್ತಾರೆ? ಇದಕ್ಕೆ ಬೇರೆ ಬೇರೆ ಕಾರಣಗಳಿರಬಹುದು. ಆದರೆ ಹಾವು ಶೀತರಕ್ತ ಪ್ರಾಣಿ, ಅವುಗಳ ದೇಹದಲ್ಲಿ ಸ್ವತಃ ಶಾಖ ಉತ್ಪತ್ತಿಯಾಗುವುದಿಲ್ಲ. ಆದ್ದರಿಂದ ಅವು ಬಿಸಿಲು ಕಾಯುವುದರಿಂದ ಸೂರ್ಯನ ಶಾಖವನ್ನು ಹೀರಿಕೊಳ್ಳುತ್ತವೆ. ಹೀಗಾಗಿ ಹಾವುಗಳು ಬೇಸಿಗೆಯಲ್ಲಿ ಹೆಚ್ಚಾಗಿ ಕಾಣಸಿಗುತ್ತವೆ. ಹಾವುಗಳು ಅತಿ ಹೆಚ್ಚು ಉಷ್ಣತೆಯನ್ನಾಗಲಿ, ಅತಿ ಕಡಿಮೆ ಉಷ್ಣತೆಯನ್ನಾಗಲಿ ತಡೆದುಕೊಳ್ಳಲಾರವು.

ಹುತ್ತದೊಳಗೆ ತುಂಬಾ ತಂಪಾಗಿರುವುದರಿಂದ ಹಾವುಗಳಿಗೆ ತುಂಬಾ ಉಷ್ಣತೆಯೆನಿಸಿದಾಗ ಹುತ್ತದೊಳಗೆ ಅಥವಾ ಮಣ್ಣಿನೊಳಗೆ ಹೋಗುತ್ತವೆ. ಆದರೆ ಯಾವಾಗಲು ಹುತ್ತದೊಳಗೆ ಇರುವುದಿಲ್ಲ. ಹುತ್ತಗಳು ಗೆದ್ದಲು ಹುಳುಗಳ ಗೂಡು. ಹುತ್ತಕಾಲಿಯಿದ್ದಾಗ, ವಾತಾವರಣದಲ್ಲಿ ಅತಿ ಹೆಚ್ಚು ಉಷ್ಣತೆಯಿರುವಾಗ ಹಾವುಗಳು ಹುತ್ತದೊಳಗೆ ಹೋಗುವ ಸಾಧ್ಯತೆ ಇದೆ.

ಆದರೆ ನಾಗರಪಂಚಮಿ ಬರುವುದು ಆಗಸ್ಟ್ ತಿಂಗಳಲ್ಲಿ. ಆವಾಗ ಮಳೆಗಾಲ ಪ್ರಾರಂಭವಾಗಿರುತ್ತದೆ. ಆಗ ಹೆಚ್ಚು ಉಷ್ಣತೆಯಿರುವುದಿಲ್ಲ. ಹಾಗಾಗಿ ಹಾವುಗಳು ಹುತ್ತದಲ್ಲಿರುವುದು ಕಡಿಮೆ. ಹುತ್ತವೆಂದರೆ ಹಾವಿನ ಮನೆಯೆಂದೆ ಎಲ್ಲರ ನಂಬಿಕೆ. ಹೊಲಗದ್ದೆಗಳಲ್ಲಿ ಹುತ್ತ ಬೆಳೆದರೆ ಹಾವು ಬಂದು ವಾಸಮಾಡುತ್ತದೆ ಎಂಬ ಭಯ ಜನರದ್ದು. ಹೇಗಾದರು ಮಾಡಿ ಹುತ್ತವನ್ನು ಹಾವಿನ ವಾಸಕ್ಕೆ ಯೋಗ್ಯವಲ್ಲದ ಹಾಗೆ ಮಾಡಲು ಹಾಲು ಸುರಿಯುವ ಪದ್ಧತಿ ಹುಟ್ಟಿಕೊಂಡಿರಬಹುದು. ಹುತ್ತಕ್ಕೆ ಹಾಲು ಹಾಕುವುದರಿಂದ ಮಣ್ಣು ಮೆತ್ತಗೆ ಆಗುತ್ತದೆ. ಹಾಲಿನ ರುಚಿಗೆ ಇರುವೆಗಳು ಬರುತ್ತವೆ. ಇದರಿಂದಾಗಿ ಹೊಲಗದ್ದೆಗಳಲ್ಲಿ ಹಾವಿಗೆ ವಾಸಮಾಡಲು ಅವಕಾಶವಿರುವುದಿಲ್ಲ. ಹಾಗಾಗಿ ರೈತರು ನೆಮ್ಮದಿಯಿಂದ ಬೇಸಾಯ ಮಾಡಬಹುದು. ಈ ಕಾರಣಕ್ಕಾಗಿ ಹುತ್ತಕ್ಕೆ ಹಾಲೆರೆವರೋ ಏನೋ.

ಕೆಲವೊಂದು ಕಡೆಗಳಲ್ಲಿ ಜೀವಂತ ಹಾವುಗಳನ್ನು ಹಿಡಿದುಕೊಂಡು ಪೂಜೆಮಾಡುತ್ತಾರೆ. ಅದರಿಂದಲು ಹಾವುಗಳಿಗೆ ಸಂಕಟವಾಗುತ್ತದೆ. ಹಾವುಗಳಿಗೆ ಕಣ್ಣಿನ ರೆಪ್ಪೆ ಇರುವುದಿಲ್ಲ.

ಪೂಜೆಗೆ ಬಳಸುವ ಅರಿಶಿಣ, ಕುಂಕುಮವನ್ನ ಹಾವಿನ ಮೇಲೆ ಹಾಕುವುದರಿಂದ ಹಾವಿನ ಕಣ್ಣಿಗೆ ತೊಂದರೆಯಾಗಬಹುದು. ಮತ್ತು ಅದರಲ್ಲಿನ ರಾಸಾಯನಿಕಗಳಿಂದ ಕಣ್ಣುಗಳು ಕುರುಡಾಗಬಹುದು.

ಇಷ್ಟೇ ಅಲ್ಲದೆ ಪೂಜೆಯಲ್ಲಿ ಬಳಸುವ ಅಗರಬತ್ತಿಗಳು, ಧೂಪ ಮತ್ತು ಕರ್ಪೂರಗಳಿಂದ ಬರುವ ಹೊಗೆಯಿಂದ ಉಸಿರಾಟಕ್ಕೆ ತೊಂದರೆಯಾಗಬಹುದು. ಪೂಜೆಯ ಹೆಸರಿನಲ್ಲಿ ಹಾವುಗಳನ್ನು ಹಿಂಸಿಸದಿರಿ. ಹಾವುಗಳನ್ನು ರಕ್ಷಿಸುವುದು ನಮ್ಮೆಲ್ಲರ ಕರ್ತವ್ಯ.

ಹಾವುಗಳು ಮಾಂಸಾಹಾರಿ ಜೀವಿಗಳು. ಅವು ಕೇವಲ ಇಲಿ, ಕಪ್ಪೆ, ಹಕ್ಕಿ, ಮೊಟ್ಟೆ ಮುಂತಾದವುಗಳನ್ನು ತಿಂದು ಬದುಕುತ್ತವೆ. ಇದರಿಂದ ಪ್ರಕೃತಿಯ ಸಮತೋಲನ ಕಾಯುತ್ತದೆ. ಹಾವುಗಳು ಕಿವುಡು, ಅವುಗಳಿಗೆ ಸಂಗೀತ ಕೇಳುವುದಿಲ್ಲ ಬದಲಾಗಿ ಅವು ಹಾವಾಡಿಗನ ಪುಂಗಿಯ ಚಲನೆಯನ್ನು ನೋಡುತ್ತಾ ತನ್ನ ತಲೆದೂಗುತ್ತದೆ. ಹಾವುಗಳು ಭೂಮಿಯ ಮೇಲೆ ಬರುವ ಧ್ವನಿ ತರಂಗಗಳನ್ನು ಮಾತ್ರ ಗ್ರಹಿಸುತ್ತದೆ ಮತ್ತು ಅವುಗಳು ಮೂಗಿನಿಂದಲ್ಲಾ, ನಾಲಗೆಯಿಂದ ವಾಸನೆ ಗ್ರಹಿಸುತ್ತವೆ.

**“ಸರ್ಪಗಳನ್ನು ಸಂರಕ್ಷಿಸಿ"**

::::::::::::::::::::::::::::::::::::::::::::

**ಪರೀಕ್ಷಿತ್**
**ಎಂಎಸ್ಸಿ ವಿದ್ಯಾರ್ಥಿ,**
**ವನ್ಯಜೀವಿ ಮತ್ತು ನಿರ್ವಹಣೆ ವಿಭಾಗ, ಕುವೆಂಪು ವಿಶ್ವವಿದ್ಯಾಲಯ**
**ಶಂಕರಘಟ್ಟ, ಶಿವಮೊಗ್ಗ**

ಲೇಖನ 04

# ಬದುಕು ಹಸಿರಾಗಿಸುವ ಬಡವರ ಹಣ್ಣು ಹುಲುಸಾಗಿ ಬೆಳೆಯುವ ಹಲಸು

"ಹಸಿದು ಹಲಸು ತಿನ್ನು, ಉಂಡು ಮಾವು ತಿನ್ನು" ನಮ್ಮ ಹಿರಿಯರು ಅಳೆದು ತೂಗಿ ಆರೋಗ್ಯವನು ಅನುಲಕ್ಷಿಸಿ ಅನುಭವದ ಆಧಾರದ ಮೇಲೆ ನಿರ್ಮಿತಗೊಂಡ, ಮಲೆನಾಡಿನ ಜನಮಾನಸದಲ್ಲಿ ಹರಿದಾಡುವ ಪ್ರಚಲಿತ ಗಾದೆಮಾತಿದು. ಒರಟು ಹಲಸು ಒಳಗಡೆ ಸೊಗಸು ನಿನ್ನ ಮಹಿಮೆ ನೂರೆಂಟು. ಹಲಸಿನ ಹಣ್ಣನ್ನು ಬಡವರ ಹಣ್ಣು, ಬಡವರ ಕಲ್ಪವೃಕ್ಷ ಎಂತಲೂ ಕರೆಯುವದಿದೆ. ಇದು ಕೇವಲ ಹಣ್ಣಲ್ಲ ಹಣ ಕೊಡುವ ಧನಲಕ್ಷ್ಮಿಯಂತೆ ಹಲಸು.



ಬಣ್ಣ, ಆಕಾರ, ರುಚಿ, ಗಾತ್ರದ ಆಧಾರದ ಮೇಲೆ ಹಲಸಿನ ಅನೇಕ ತಳಿಗಳನ್ನು ಗುರುತಿಸಲಾಗಿದೆ. ಹಲಸಿನ ಮರವನ್ನು ಒಂದರ್ಥದಲ್ಲಿ "ಕಲ್ಪವೃಕ್ಷ"ಕ್ಕೆ ಸರಿಸಮನಾದ ಮರವೆಂದರೂ ತಪ್ಪಾಗಲಾರದು. ಕೇವಲ ಹಣ್ಣೊಂದು ನೀಡಿ ಸಂತೃಪ್ತವಾಗುವ ಮರವಲ್ಲ.

ದೇವಾನುದೇವತೆಗಳಿಗೂ ಪ್ರಿಯವಾದ ಹಲಸಿನ ಮರವನ್ನು ಹೋಮಹವನಗಳಲ್ಲಿ ಕಟ್ಟಿಗೆಯಾಗಿ ಬಳಸುವ ರೂಢಿಯಿದೆ. ಸಸ್ಯ ಶಾಸ್ತ್ರೀಯ ವನ ನಿರ್ಮಾಣದಲ್ಲಿ ವಿವಿಧ ವನಗಳಲ್ಲಿ ವೃಕ್ಷಾರೋಪಣ ಮಾಡುವ ವನತರು. ಹಬ್ಬದದಿನ ಅಡುಗೆಮನೆಯಲ್ಲಿ ಹಲಸಿನಿಂದ ತಯಾರಾಗುವ ಹಸಿರು ಆಹಾರ. ಅಥರ್ವಣವೇದ, ಬಾಣಭಟ್ಟನ ಕಾದಂಬರಿ, ಚರಕ ಸಂಹಿತೆ, ವರಾಹ ಸಂಹಿತೆ, ಸುಶ್ರುತ ಸಂಹಿತೆ, ಅಷ್ಟಾಂಗ ಹೃದಯ ರಾಮಾಯಣ ಗ್ರಂಥಗಳಲ್ಲಿ ಉಲ್ಲೇಖವಿರುವ ಪ್ರಾಚೀನ ಫಲ ಪನಸ. ನಾಲ್ಕು ಸಾವಿರ ವರ್ಷಗಳಷ್ಟು ಪ್ರಾಚೀನವಾದ ಹಲಸಿನಿಂದ ವಿವಿಧ ಬಗೆಯ ಅಡುಗೆಯ ಕುರಿತು ಮಂಗರಸನ ಸೂಪಶಾಸ್ತ್ರದಲ್ಲಿ ಬರೆಯಲಾಗಿದೆ. ಹಲಸಿನಿಂದ ಸುಮಾರು 220ಕ್ಕೂ ಹೆಚ್ಚು ಖಾದ್ಯ ತಯಾರಿಸಬಹುದಾಗಿದೆ. ನಾಡಿನ ತುಂಬಾ ಪ್ರಸಿದ್ಧ ದಕ್ಷಿಣ ಕಾಶಿ ಗೋಕರ್ಣದಲ್ಲಿ "ಕೊಟ್ಟೆಇಡ್ಲಿ (ಕಣಜ)" ಇದು ಗಣಪತಿಯಲ್ಲಿ ಹೇಳಿಕೊಳ್ಳುವ ಹರಕೆ. ಮಣಿಪುರದ ಕೈನಾ ಬೆಟ್ಟ ಹಲಸಿನಮರದ ಪವಿತ್ರ ಸ್ಥಳವಾಗಿದೆ. ಹಲಸು ಹಣ್ಣಾದರೆ ಘಮಘಮ ಪರಿಮಳ ತಕ್ಷಣ ತಿಂದು ಮುಗಿಸಬೇಕು ಅದಕ್ಕೊಂದು ನಾಣ್ಣುಡಿಯಿದೆ. "ಅರಸು ಬರುವ ತನಕ ಹಲಸು ತಡೆಯುವದಿಲ್ಲ" ಹತ್ತು ಹಲಸಿನ ಮರವಿದ್ದರೆ ಒಬ್ಬ ಬಡವ ಬದುಕು ಕಟ್ಟಿಕೊಳ್ಳಬಹುದು.. ಬದುಕು ಹಸಿರಾಗಿಸುವ ಬಡವರ ಹಣ್ಣು ಹುಲುಸಾಗಿ ಬೆಳೆಯುವ ಹಲಸು ತಿನ್ನಲು ಬಲು ರುಚಿಕರ.

ಭಾರತವೇ ತವರುಮಾನೆಯಾಗಿರುವ ಹಲಸಿನ ಇತಿಹಾಸಕೆ ನಾಲ್ಕು ಸಾವಿರ ವರುಷ. ಭಾರತದ ಪಶ್ಚಿಮ ಘಟ್ಟ ಪ್ರದೇಶದಲ್ಲಿ ಹೆಚ್ಚು ಬಳಕೆಯಿರುವ ಹಲಸಿನ ಕುರಿತು ಕ್ರಿ.ಪೂ 300ರಲ್ಲೇ ಗ್ರೀಕ್ ದಾರ್ಶನಿಕ ಮತ್ತು ವಿಜ್ಞಾನಿ ಥಿಯೋಪ್ರಾಸ್ಟಸ್ ಭಾರತೀಯರ ಹಲಸಿನ ಉಪಯೋಗದ ಕುರಿತು ದಾಖಲಿಸಿದ್ದಾನೆ. ಹಲಸಿನ ನಾಮಾವಳಿ ನೋಡೋಣ. ಮೊರೆಸಿ ಸಸ್ಯ ಕುಟುಂಬದಲ್ಲಿ ಜನಿಸಿದ ಹಲಸಿನ ವೈಜ್ಞಾನಿಕ ಹೆಸರು ಆರ್ಟೋಕಾರ್ಪಸ್ ಹೆಟಿರೋಫಿಲ್ಲಸ್, ಕನ್ನಡದಲ್ಲಿ ಹಲಸು, ಚಂದ್ರ ಹಲಸು, ಸಿದ್ದ ಹಲಸು, ಬಕ್ಕೆಮರ, ಕಡಬಿನ ಹಲಸು, ಹಲವಾರು ಸಣ್ಣ ಸಣ್ಣ ಮುಳ್ಳುಗಳಿಂದ ಕೂಡಿರುವದರಿಂದ ಕಂಟಕ ಫಲವೆಂದು, ಜಠರದ ಮೇಲೆ ಪರಿಣಾಮ ಕೊಡುವ ಫಲ ಅದಕೆ ಅಮಾಷಯ ಫಲವೆಂದು, ಗಾತ್ರದಲ್ಲಿ ದೊಡ್ಡದಾಗಿರುವದರಿಂದ ಮಹಾಸರ್ಜ, ಬೃಹತ್ ಫಲವೆಂದು, ಸಂಗೀತವಾದ್ಯ ಮೃದಂಗದ ಆಕಾರದಲ್ಲಿರುವದರಿಂದ ಮೃದಂಗಫಲವೆಂದು, ಪುಷ್ಪಗಳು ಕಾಣದೇ ಇರುವದರಿಂದ ಅಪುಷ್ಟಫಲವೆಂದು, ಮರದ ತುಂಬಾ ಫಲಬಿಡುವದರಿಂದ ಫಲವೃಕ್ಷಕವೆಂದು, ಮಾಗಿದ ಫಲ ವಿಶಿಷ್ಟವಾಸನೆ ಹೊಂದಿರುವರಿಂದ ಪೂತಫಲವೆಂದು, ಸ್ಕಂದೇ ಫಲನಿ ಜಯಂತೇ ಅಸ್ಯ ಇತಿ ಈ ಮರವೂ ತನ್ನ ಕಾಂಡದ ಮೇಲೆಯೇ ಫಲ ನೀಡುತ್ತದೆ ಅದಕೆ ಸ್ಕಂದ ಫಲವೆಂದು ಮತ್ತು ಪನಸ ಎಂಬುದು ಸಂಸ್ಕೃತದ ಭಾಷೆಯ ನಾಮಕರಣಗಳು. ಹಿಂದಿಯಲ್ಲಿ ಕಾತಲ್, ತಮಿಳಿನಲ್ಲಿ ಪಾಲಮರಂ, ಮಲಯಾಳಂ ಜಾಕ್ಕ, ತೆಲುಗಿನಲ್ಲಿ ಪನಸ ಚೆಟ್ಟು, ಇಂಗ್ಲಿಷಿನಲ್ಲಿ ಜಾಕ್ ಫ್ರೂಟ್ ಟ್ರೀ ಎಂಬ ಹೆಸರಿನಿಂದ ಕರೆಯುತ್ತಾರೆ.



ದೇಶವ್ಯಾಪಿಯಾಗಿ ಹಲಸಿನ ಮರವು ಸಾಂಸ್ಕೃತಿಕ ಮೌಲ್ಯವನ್ನು ಹೊಂದಿದೆ. ಕೊಡಗಿನ ಮದುವೆಗಳಲ್ಲಿ ವಿಶಿಷ್ಟ ಸಂಪ್ರದಾಯವಿದೆ ಮದುವೆ ಹಂದರಕೆ ಒಂದು ಟೊಂಗೆಯಾದರೂ ಹಲಸಿನಮರದು ಹಾಕಲೇಬೇಕು. ಗ್ರಾಮಗಳಲ್ಲಿ ಕುಚಲಕ್ಕಿ ಗಂಜಿ ಊಟ ಮಡುವಾಗ ಹಲಸಿನ ಎಲೆಯ ಚಮಚ ಮಾಡಿಕೊಳ್ಳುವ ರೂಢಿಯಿದೆ. ಎಳೆ ಚಿಗುರಿನ ತಂಬುಳಿ ಮಾಡುವರು, ಹೋಮ ಹವನಗಳಿಗೆ ಹಲಸಿನ ಸೌದೆಯೇ ಪ್ರಶಸ್ತ. ಎಲೆಯನ್ನು ಅಗ್ನಿಗೆ ತುಪ್ಪ ಅರ್ಪಿಸಲು ಚಮಚವಾಗಿ ಬಳಕೆಯಿದೆ.

ನಾಗರ ಪಂಚಮಿಗೆ ಹಲಸಿನ ಬೀಜದ ಹೋಳಿಗೆ ಮಾಡುತ್ತಾರೆ. ಹಲಸಿನ ಬೀಜಹಾಕಿ ತಗಟೆ ಸೊಪ್ಪಿನ ಪಲ್ಯ ಮಾಡುವದು ನಮ್ಮೂರ ಪದ್ದತಿ. ಮದುವೆಯ ನಂತರ ಮದುಮಗ ಹಲಸಿನ ಟೊಂಗೆ ಹಿಡಿದು ವಧು ಸಗಣಿ ಬುಟ್ಟಿಯೊಂದಿಗೆ ಜಮೀನಿಗೆ ಹೋಗಿ ಹಲಸಿನ ಟೊಂಗೆ ನೆಟ್ಟು ಸಗಣಿ ಹಾಕಿ ಬರುವದು ಕೊಡವರ ವಿವಾಹದ ಪದ್ದತಿಯಾಗಿದೆ.

"ಹಲಸು ಹಿಸಿದು ತಿನ್ನು ಉಂಡೆ ಮಾವು ತಿನ್ನು" ಅಂದರೆ ಹಲಸನ್ನು ಕೈಯಿಂದ ಹಿಸಿದು ತಿನ್ನಬೇಕು, ಮಾವನ್ನು ಇಡಿಯಾಗಿ ತಿನ್ನು ಎಂಬುದಾಗಿದೆ ಎಂದು ಮಡಿಕೇರಿಯ ಪರಿಸರ ತಜ್ಞ ಶಿವಕುಮಾರ ಚುಕ್ಕೆಮನೆ ತಮ್ಮ ಮಾಹಿತಿ ಹಂಚಿದರು. ಹಲಸಿನ ಎಲೆಯಿಂದ ಎತ್ತುಮಾಡಿ ಬಾಳೆದಿಂಡಿನ ಗಾಡಿಗೆ ಸಿಕ್ಕಿಸಿ ಅದನ್ನು ಕೂರಿಗೆ ಮುಂದಿಟ್ಟು ಪೂಜಿಸುವ ಶುಭಗಳಿಗೆ ಆರಿದ್ರಾ ನಕ್ಷತ್ರದ ಕೂರಿಗೆ ಹಬ್ಬದ ದಿನವಿರುತ್ತದೆ, ಕಲ್ಲಿಯ ಸಾಮಾಜಿಕ ಕಾರ್ಯಕರ್ತೆ ಲಲಿತಾ ನಾಯ್ಕ ತಿಳಿಸಿದರು. ನಾಗರ ಪಂಚಮಿ ಹಬ್ಬದೊಳಗೆ ಹಲಸಿನ ಬೀಜ ತಿನ್ನಬಾರದು ಇದು ಅಲಿಖಿತ ನಿಯಮ ಹಬ್ಬದ ದಿನ ಬೀಜದ ಬುಡ್ನ ಮಾಡಿ ನಾಗರಿಗೆ ನೈವೆದ್ಯ ಮಾಡಿದ ನಂತರವೇ ತಿನ್ನಲು ಅವಕಾಶ. ಕೃಷ್ಣಾಷ್ಟಮಿಯಂದು ಪ್ರಸಾದವಾಗಿ ಹಲಸಿನ ತೊಳೆ ಉಂಡ್ಲೆಕಾಳು ಸಿಹಿತಿಂಡಿ ಮಾಡುವದು ಬಹಳ ಕಾಲದಿಂದ ನಡೆದುಕೊಂಡು ಬಂದಿದೆ.



ಗಣೇಶ ಹಬ್ಬದ ಮಂಟಪಕೆ ಹಲಸಿನ ಕಾಯಿ ಫಲಾವಳಿ ಸಾಲಿನಲ್ಲಿ ಕಟ್ಟುವದು ಹಬ್ಬದ ಸಂಪ್ರದಾಯ.

ಚಕ್ಕೆ ಪಳಜ, ನೀರು ಪಳಜ, ಸಾಂಬಾರು, ಪಲ್ಯ, ಸೋಳೆ ಹಸಿ, ಬೀಜದ ಮೇಲಿನ ಸಿಪ್ಪೆಯ (ಹೊದಿಗಡ್ಡೆ) ಪಲ್ಯ, ಹಲಸಿನ ಅಂತ್ರ ಪಲ್ಯ, ಬೀಜದ ಸಾರು, ಮೇಲಾರ ಎಂಬ ಅಡುಗೆ ಮಾಡುವದು ಮಲೆನಾಡಿನಲ್ಲಿದೆ. ಹಣ್ಣಿನ ಕಡಬು ರುಚಿಯಾದ ತಿಂಡಿ ಎಂದು ಶಿಕ್ಷಕಿ ಬಿದ್ರಮನೆ ವಿದ್ಯಾ ಭಟ್ಟ ಹೇಳಿದರು. ಭಕ್ತರು ತಮ್ಮ ಅಭಿಲಾಷೆ ಈಡೆರಿಸಿಕೊಳ್ಳಲು ಹಲಸಿನ ಎಲೆಯಿಂದ ಕೊಟ್ಟೆ ಕಡಬು ಮಾಡಿ ಗೋಕರ್ಣದ ಕೇತಕಿ ವಿನಾಯಕ, ಬಟ್ಟೆ ವಿನಾಯಕ, ದೊಡ್ಡಗಣಪತಿಗೆ ಕೊಟ್ಟೆ ಕಣಜದಿಂದ ಅಲಂಕಾರ ಮಾಡಿಕೊಡುವೆ ಎಂಬ ಹರಕೆ ಭಕ್ತರದು ಎಂದು ಸಾಮಾಜಿಕ ಕಾರ್ಯಕರ್ತ ಸೀತಾ ಕೂರ್ಸೆ ತಮ್ಮೂರಿನ ಹರಕೆಯ ಮಾಹಿತಿ ಹಂಚಿದರು. ನೂಲು ಹುಣ್ಣಿಮೆಗೆ ಹಲಸಿನ ಎಲೆ ಕಡಬು ನೈವೆದ್ಯ ಸಂಪ್ರದಾಯ ರಾಮಕ್ಷತ್ರಿಯರದು.

ಬೇಸಿಗೆಯಲ್ಲಿ ಸಂಗ್ರಹಿಸಿದ ಹಲಸಿನ ಮೇಣಕ್ಕೆ ಭತ್ತದ ಉಮಿ ಸೇರಿಸಿ ಕಡ್ಡಿ ಸುತ್ತಿಟ್ಟು ಅದನ್ನು ದೀಪಾವಳಿಯಂದು ಜಮೀನುಗಳಲ್ಲಿ ದೀಪ ಹಚ್ಚುವ ವಿಶಿಷ್ಠ ರೂಢಿ ಕಳಸದಲ್ಲಿದೆ ಎನ್ನಲಾಗಿದೆ. ಕೃಷ್ಣನ ಮೂರ್ತಿ, ದೇವರ ಮನೆಯ ಬಾಗಿಲು, ದೇವರ ಪೀಠ, ಪ್ರಧಾನ ಬಾಗಿಲು, ಮಜ್ಜಿಗೆ ಕಡೆಯುವ ಕಡಗೋಲು ಕೂಡಾ ಹಲಸಿನ ಕಟ್ಟಿಗೆಯಿಂದ ಮಾಡಿದರೆ ಶ್ರೇಷ್ಠ ಎಂಬ ನಂಬಿಕೆಯಿದೆ. ಮೊದಲ ಬಾರಿಗೆ ಹಾಲು ನೀಡಿದ ಹಸುವಿನ ಹಾಲನ್ನು ಹಲಸಿನ ಮರದ ಬುಡಕ್ಕೆ ಅರ್ಪಿಸುವದು ಕೇರಳದ ಸಾಮಾನ್ಯ ಆಚರಣೆಯಾಗಿದೆ. ಹಿಂದೂ ಅಂತ್ಯಕ್ರಿಯೆಯ ವಿಧಿಗಳ ಪೂರ್ವಜರ ಚಿತಾಭಸ್ಮವನ್ನು ಹಲಸಿನಮರದ ಕೆಳಗೆ ಇರಿಸಲಾಗುತ್ತದೆ.

ಮತ್ತು ಪ್ರತಿದಿನ ಸಂಜೆ ಒಂದು ವರ್ಷದವರೆಗೆ ಎಣ್ಣೆ ದೀಪವನ್ನು ಬೆಳಗಿಸಲಾಗುತ್ತದೆ ಎಂದು ಮುಂಡಗೋಡಿನ ಪತ್ರಕರ್ತ ಪಿ.ಎಸ್. ಸದಾನಂದ ಕೇರಳದ ಮಾಹಿತಿ ವಿವರಿಸಿದರು.

ತಮಿಳುನಾಡಿನ ಧಾರ್ಮಿಕ ಆಚರಣೆಗಳಲ್ಲಿ ಹಲಸಿನಮರ ಮತ್ತು ಹಣ್ಣುಗಳಿಗೆ ಮಹತ್ವವಿದೆ. ಮಾವು, ಹಲಸು, ಬಾಳೆಹಣ್ಣು ಈ ಮೂರನ್ನು "ಮುತ್ತುಕಾನಿ" ಎಂದು ಪೂಜಿಸಲಾಗುತ್ತದೆ. ಈ ಹಣ್ಣುಗಳನ್ನು ಕೇವಲ ಆಹಾರವಾಗಿ ಮಾತ್ರವಲ್ಲದೇ, ಧಾರ್ಮಿಕ ಅರ್ಪಣೆಗಳಿಗೆ ಬಳಸಲಾಗುತ್ತದೆ. ಅತಿಥಿಗಳಿಗೆ ಈ ಮೂರು ಹಣ್ಣುಗಳನ್ನು ನೀಡುವದು ಗೌರವ ಮತ್ತು ಆತಿಥ್ಯದ ಸಂಕೇತವಾಗಿದೆ. ಪ್ರಾಚೀನ ತಮಿಳು ಸಾಹಿತ್ಯದಲ್ಲೂ ಉಲ್ಲೇಖವಿದೆ. ತಮಿಳು ಹೊಸವರ್ಷದಂದು ಬೇವಿನ ಹೂವು, ಮಾವು, ಹಲಸು, ವೀಳ್ಯದೆಲೆ ಮತ್ತು ಬಾಳೆಹಣ್ಣುಗಳನ್ನು ದೇವರಿಗೆ ಅರ್ಪಿಸಲಾಗುವದು. ಇದು ಋತು ಬದಲಾವಣೆಯ ಸಂಕೇತ ಮತ್ತು ಆರೋಗ್ಯ ಕಾಪಾಡುವ ಸಂಕೇತವಾಗಿದೆ ಎನ್ನಲಾಗುತ್ತದೆ. ತಮಿಳುನಾಡಿನ ದೇವಾಲಯಗಳಲ್ಲಿ ಹಲಸಿನ ಮರ ಪವಿತ್ರ ವೃಕ್ಷವೆಂದು ಪರಿಗಣಿಸಲಾಗುತ್ತದೆ.

ಕಾಂಚಿಪುರಂ ಜಿಲ್ಲೆಯ ತಿರುಮಕರಾಲೀಶ್ವರರ್ ದೇವಾಲಯದ ಸ್ಥಳ ಪುರಾಣದ ಪ್ರಕಾರ ಬ್ರಹ್ಮನು ಶಿವನನನ್ನು ಪೂಜಿಸಿ ಪ್ರತಿದಿನ ಒಂದು ಹಣ್ಣು ನೀಡುವ ಹಲಸಿನಮರ ನೆಟ್ಟನು ಎಂಬ ನಂಬಿಕೆಯಿದೆ. ತಿರುನೆಲ್ವೇಲಿ ಜಿಲ್ಲೆಯ ಕುಟ್ರಾಳ್‌ನಾಥರ್ ದೇವಾಲಯದಲ್ಲಿ ಸ್ಥಳವೃಕ್ಷ. ಪ್ರತಿವರ್ಷವೂ ಹಣ್ಣುಗಳು ನೀಡಿದರು ಯಾರು ಅದನ್ನು ಕೀಳುವದಿಲ್ಲ.

ಬಿಡುವ ಹಣ್ಣುಗಳು ಶಿವಲಿಂಗದ ಆಕಾರದಲ್ಲಿರುತ್ತವೆ ಎಂದು ನಂಬಲಾಗಿದೆ. ತಂಜಾವೂರು ತಿರುನೀಲಕ್ಕುಡಿ ನೀಲಕಂಠೇಶ್ವರರ್ ದೇವಾಲಯದಲ್ಲಿ ದೇವರಿಗೆ ಅರ್ಪಿಸದ ಹಣ್ಣು ದೇವಾಲಯದ ಹೊರಗೆ ಹಾಳಾಗುತ್ತದೆ ಎಂಬ ನಂಬಿಕೆಯಿದೆ. ಬಿಹಾರದಲ್ಲಿ ನಾಗರಪಂಚಮಿಯಂದು ಮಾವಿನಹಣ್ಣು ಮತ್ತು ಹಲಸಿನ ಹಣ್ಣು ತಿನ್ನುವ ರೂಢಿಯಿದೆ. ಸಸ್ಯ ಶಾಸ್ತ್ರಿಯ ವನಗಳಾದ ರಾಶಿವನದಲ್ಲಿ ಮಿಥುನ ರಾಶಿಯ ಪ್ರತಿನಿಧಿಯಾಗಿ, ನಕ್ಷತ್ರವನದಲ್ಲಿ ಉತ್ತರಾಷಾಢ ನಕ್ಷತ್ರದ ಪ್ರತಿನಿಧಿಯಾಗಿ, ಅಶೋಕವನದಲ್ಲಿಯೂ, ಸಂಗಿತಸ್ವರವನದಲ್ಲು ಹಲಸಿನ ಗಿಡವನ್ನು ವೃಕ್ಷರೋಪಣ ಮಾಡುವಂತೆ ತಿಳಿಸುತ್ತದೆ. ತಬಲಾ, ತಂಬೂರಿ, ವೀಣೆ ಮೃದಂಗ ವಾದ್ಯ ತಯಾರಿಕೆಯಲ್ಲಿ ಹಲಸಿನ ಮರ ಉಪಯೋಗಿಸುತ್ತಾರೆ. ಗಾಯಚಿಕಿತ್ಸೆಗೆ, ರಕ್ತಭೇದಿಗೆ, ಚರ್ಮರೋಗಗಳಿಗೆ, ಶೀತದ ತಲೆನೋವಿಗೆ ಹಲಸಿನಿಂದ ಔಷಧ ತಯಾರಿಸುವರು. ಹಣ್ಣಿನಲ್ಲಿ ವಿಟಮಿನ್ "ಸಿ" ಒಳಗೊಂಡಿರುವದರಿಂದ ವೈರಲ್, ಬ್ಯಾಕ್ಟಿರಿಯಾದಂತಹ ಸೋಂಕಿನಿಂದ ನಮ್ಮನ್ನು ರಕ್ಷಿಸುತ್ತದೆ. ಬೇರು, ಕಾಂಡ, ಎಲೆ, ತೊಗಟೆ, ಹಣ್ಣು ಸಸ್ಯಕ್ಷೀರ ಔಷಧಿಯ ಭಾಗಗಳಾಗಿದೆ.

ಇದ್ದರೂ ಸಾವಿರ ಸತ್ತರು ಸಾವಿರ ಎಂಬ ನಾಣ್ಣುಡಿ ಹಲಸಿನ ಮರಕ್ಕೂ ಅನ್ವಯಿಸುತ್ತದೆ. ಬಡವರ ಕಲ್ಪವೃಕ್ಷ ಹಲಸಿನ ಬೀಜದಿಂದ ಸಾವಿರ ಸಾವಿರ ಸಸಿಗಳನ್ನು ಪಡೆದು ಹಲಸು ಬೆಳೆಯೋಣ ಬದುಕು ಬಂಗಾರ ಮಾಡಿಕೊಳ್ಳೋಣ.

**ಉಮಾಪತಿ ಭಟ್ಟ ಕೆ ವಿ**
**ರಾಜ್ಯ ಸಂಯೋಜಕರು, ಪರಿಸರ ವಿಭಾಗ,**
**ಯೂತ್ ಫಾರ್ ಸೇವಾ ಬೆಂಗಳೂರು.**

ಲೇಖನ 05

# ಕಬೂತ್ತರ್ ಜಾ..ಜಾ...ಜಾ....

ಪಾರಿವಾಳಗಳಿಗೆ ಕಾಳು ನೀಡುವ ಮತ್ತು ಮನೆಯಲ್ಲಿ ಪಾರಿವಾಳಗಳನ್ನು ಸಾಕುವ ಹಕ್ಕಿ ಮಿತ್ರರೇ, ಸ್ವಲ್ಪ ಇತ್ತ ಗಮನ ಹರಿಸುವಿರಾ.? ವಿಭಿನ್ನ ರೂಪಗಳಿಂದ ಸುಂದರವಾಗಿ ಕಾಣುವ ಸಾಕು ಪಾರಿವಾಳಗಳಲ್ಲದೆ ಆಹಾರ ಹುಡುಕಿಕೊಂಡು ನಮ್ಮನೆ ಅಂಗಳಕ್ಕೆ ಬರುವ ಸಾಮಾನ್ಯವಾದ ಪಾರಿವಾಳಗಳಿಂದ ಉಂಟಾಗುವ ಸಮಸ್ಯೆಗಳು ಹತ್ತು ಹಲವು. ಮಕ್ಕಳು ಹಾಗೂ ವೃದ್ಧರಿರುವ ಮನೆಗಳ ಸುತ್ತ ಪಾರಿವಾಳಗಳು ಹಾರದಿದ್ದರೆ ಒಳಿತು..!!




**ಕಬೂತ್ತರ್ ಜಾ..ಜಾ..ಜಾ...**

"ಕಾಗೆಗಳ ಸಂಖ್ಯೆ ಈವಾಗ ಕಡಿಮೆಯಾಗಿದೆ. ಪಾರಿವಾಳಗಳ ಸಂಖ್ಯೆ ಹೆಚ್ಚಾಗಿದೆ. ಅಲ್ವಾ ಸರ್.?" ಪೇಟೆಯ ದಾರಿ ಬದಿ ವ್ಯಾಪಾರಿಯ ಮಾತುಗಳಿಗೆ 'ಹೌದು' ಎಂದೇ ಉತ್ತರಿಸಿದೆ.

"ಶಾಲೆಯಲ್ಲಿರುವ ಸಭಾಂಗಣವನ್ನು ಶುಚಿಯಾಗಿರಿಸಿಕೊಳ್ಳಲು ತುಂಬಾ ಕಷ್ಟಕರವಾಗಿದೆ. ಪಾರಿವಾಳಗಳು ಹಿಕ್ಕೆ ಹಾಕುವುದು, ಅವುಗಳು ಗೂಡು ಕಟ್ಟಿಕೊಳ್ಳುವುದು ನಮಗೆ ಅತೀವ ತೊಂದರೆಗಳನ್ನುಂಟುಮಾಡುತ್ತಿವೆ. ಒಮ್ಮೆ ಬಂದು, ಅವುಗಳನ್ನು ಹಿಡಿದುಕೊಂಡು ಹೋದರೆ ಚೆನ್ನಾಗಿತ್ತು" ಪರಿಚಿತ ಮುಖ್ಯೋಪಾಧ್ಯಾಯಿನಿಯವರ ಕಳಕಳಿಗೆ ಅರ್ಧ ಗಂಟೆಯ ವಿವರಣೆ ನೀಡಬೇಕಾಯಿತು.

ಯಾಕೆ ಪಾರಿವಾಳಗಳ ಸಂಖ್ಯೆ ಶಾಲೆಯ ಸುತ್ತ ಮುತ್ತ ಹೆಚ್ಚುತ್ತಿದೆ ಎಂಬುದನ್ನು ಮನದಟ್ಟುಮಾಡಿಕೊಡಲು ಅವರೊಡನೆ ಸ್ವಲ್ಪ ಹೋರಾಟವೇ ನಡೆಸಬೇಕಾಯಿತು. ಯಾಕೆಂದರೆ ಶಾಲೆಗೆ ಬರುವ ಪಾರಿವಾಳಗಳನ್ನು ದ್ವೇಷಿಸುತ್ತಿದ್ದರು. ಆದರೆ ಅವರ ಮನೆಯಂಗಳದಲ್ಲಿ ಬಣ್ಣ ಬಣ್ಣದ ಸ್ವದೇಶಿ ಹಾಗೂ ವಿದೇಶಿ ಪಾರಿವಾಳಗಳನ್ನು ತಮ್ಮ ಮೊಮ್ಮಕ್ಕಳ ಸಂತೋಷಕ್ಕಾಗಿ ಸಾಕುವ ಹಿರಿಯರಾಗಿದ್ದರು.!!

"ನಾನು ನಿತ್ಯವೂ ಅರ್ಧ ಕಿಲೋ ಗೋಧಿಯನ್ನು ಪಾರಿವಾಳಗಳಿಗೆ ದಾನವಾಗಿ ನೀಡುತ್ತಿದ್ದೇನೆ. ನಿಮ್ಮ ಕ್ಯಾಮರಾ ತಕೊಂಡು ಬೆಳಗ್ಗೊಮ್ಮೆ ಬಂದರೆ ಸಾಕು. ಚೆನ್ನಾಗಿ ವೀಡಿಯೋಗ್ರಫಿ, ಫೋಟೋಗ್ರಫಿ ಮಾಡಿಕೊಳ್ಳಬಹುದು" ಹೋಟೆಲ್ ಮಾಲಕರೊಬ್ಬರು ತಮ್ಮ ಹಕ್ಕಿ ಪ್ರೀತಿಯನ್ನು ಮುಂದಿರಿಸಿದರು.

ಅವರಿಗೆ ಪಾರಿವಾಳಗಳ ಬಗ್ಗೆ, ಅವುಗಳಿಂದ ಮನುಷ್ಯರಿಗಿರುವ ತೊಂದರೆಗಳ ಬಗ್ಗೆ ಪಾಠಮಾಡಿದೆ. ಸಂತೋಷದಿಂದ ಒಪ್ಪಿಕೊಂಡ ಆ ಪಕ್ಷಿ ಪ್ರೇಮಿ 'ಕಾಳು ಹಾಕುವ' ಕಾಯಕವನ್ನು ಅಂದಿನಿಂದಲೇ ನಿಲ್ಲಿಸಿಬಿಟ್ಟರು.!

ಇದೀಗ ನಮ್ಮೂರಲ್ಲಿ ಗುಂಪು ಗುಂಪಾಗಿ ಕಾಣ ಸಿಗುವ ಪಾರಿವಾಳಗಳು (Rock Pigeon) ವಿದೇಶೀ ಹಕ್ಕಿಗಳು. ಅದೆಷ್ಟೋ ವರ್ಷಗಳ ಹಿಂದೆ (ಲವ್ ಬರ್ಡ್ಸ್ ವರ್ಗಕ್ಕೆ ಸೇರಿಕೊಂಡಂತೆ) ವ್ಯಾಪಾರೀಕರಣದ ಉದ್ದೇಶದೊಂದಿಗೆ ಭಾರತಕ್ಕೆ ಬಂದವುಗಳು. ಕೆಲವೊಂದು ಪಂಜರದಿಂದ ಪಲಾಯನಗೈದು, ಮತ್ತೆ ಕೆಲವು ಕಡೆ ಆರ್ಥಿಕ ಅಡಚಣೆ ಉಂಟಾಗಿ ಸಾಕಲು ಕಷ್ಟವಾದಾಗ ತೆರೆದು ಬಿಡಲಾಯಿತು.

ಅವುಗಳು ಸುಮ್ಮನಿರುತ್ತವೆಯೇ.? ಭಾರತದ ಹವಾಮಾನಕ್ಕೆ ನಿಧಾನವಾಗೊ ಒಗ್ಗಿಕೊಂಡ ಅವುಗಳು ಮಹಡಿಗಳ ಸಂದುಗಳಲ್ಲಿ, ತೆರೆದ ಬಾವಿಗಳ ಒಳ ಬದಿಯಲ್ಲಿ ಮೊಟ್ಟೆ ಇಟ್ಟು, ಸಂತಾನ ವೃದ್ಧಿಸಿದವು. ಕ್ರಮೇಣ ಭಾರತದ ಹಕ್ಕಿ ಪ್ರಪಂಚಕ್ಕೆ ಮಾತ್ರವಲ್ಲದೆ ಭಾರತೀಯರಿಗೂ ಮಾರಕವಾಗಿ ಪರಿಣಮಿಸಿದವು.

ಹೌದು, ನಮ್ಮೂರ ಸ್ವಂತ ಪಾರಿವಾಳಗಳೆಂದರೆ ಅರಿಪುದ, ಅಂಬಲ ಪ್ರಾವ್ ಎಂದು ಆಡುಭಾಷೆಯಲ್ಲಿ ಕರೆಯುವ ಚೋರೆ ಹಕ್ಕಿ (Spotted Dove). ಅವುಗಳು ನಮ್ಮ ನಿಮ್ಮ ಅಂಗಳಗಳಲ್ಲಿ ಧಾರಾಳವಾಗಿ ಕಂಡುಬರುವ ಕಾಲವೊಂದಿತ್ತು. ಬುಲ್ ಬುಲ್, ಗುಬ್ಬಚ್ಚಿ, ಮೈನಾ, ಜೇನು ಹಕ್ಕಿ ಮೊದಲಾದ ನಮ್ಮೂರಿನ ಹಕ್ಕಿಗಳೊಂದಿಗೆ ಉತ್ತಮ ಸಂಬಂಧವನ್ನು ಅವುಗಳು ಇರಿಸಿಕೊಂಡಿದ್ದವು.

ಆದರೆ ಯಾವಾಗ ವಿದೇಶೀ ಪಾರಿವಾಳಗಳ ಆಗಮನವಾಯಿತೋ ಅಂದಿನಿಂದ ಹುಡುಕಿದರೂ ಸಿಗದ ರೀತಿಯಲ್ಲಿ ಚೋರೆ ಹಕ್ಕಿಗಳ ಸಂಖ್ಯೆ ಕಡಿಮೆಯಾಗತೊಡಗಿದವು.!


ಚಿತ್ರ ಕೃಪೆ: ಗುರು ಪ್ರಸಾದ್

ಹೌದು, ವಿದೇಶೀ ಪಾರಿವಾಳಗಳು ಯಾವಾಗ ಸ್ವದೇಶೀಯವಾಗಿ ಬದಲಾದವೋ ಅಂದಿನಿಂದ ನಮ್ಮೂರ ಸ್ವಂತ ಚೋರೆ ಹಕ್ಕಿಗಳ ಮೇಲೆ ದಬ್ಬಾಳಿಕೆ ಆರಂಭವಾಯಿತು. ಹೆಚ್ಚು ತಿನ್ನುವ ಪಾರಿವಾಳಗಳು ಚೋರೆ ಹಕ್ಕಿಗಳ ಗುಂಪುಗಳೊಂದಿಗೆ ಸೇರಿಕೊಂಡು ಆಹಾರವನ್ನು ಕಸಿದುಕೊಂಡವು. ಬಯಲು, ಗದ್ದೆ, ಮನೆಯಂಗಳಗಳಲ್ಲಿ ಬಿದ್ದಿರುವ ಆಹಾರದ ಚೂರುಗಳನ್ನು ಹೆಕ್ಕಿ ತಿನ್ನಲು ಬರುತ್ತಿದ್ದ ಚೋರೆಹಕ್ಕಿಗಳನ್ನು ಹೊಡೆದೋಡಿಸುವ ಕ್ರೂರ ಸ್ವಭಾವದ ಪಾರಿವಾಳಗಳು ಮಕ್ಕಳಿಗೂ, ವೃದ್ಧರಿಗೂ ಆರೋಗ್ಯ ಸಮಸ್ಯೆಗಳಿಗೆ ಕಾರಣವಾದವು.

ಮುಂಬಯಿ ಮಹಾನಗರದಲ್ಲಿ ಹಾಗೂ ಪುಣೆ ನಗರಸಭೆಯ ಪರಿಧಿಯಲ್ಲಿ ಪಾರಿವಾಳಗಳಿಗೆ ಕಾಳು ಹಾಕುವಂತಿಲ್ಲ. ಪಾರಿವಾಳಗಳಿಗೆ ತಿಂಡಿಯನ್ನು ನೀಡುವುದೂ ಶಿಕ್ಷಾರ್ಹ ಅಪರಾಧವಾಗಿದೆ. ವ್ಯಕ್ತಿಯೊಬ್ಬರಿಗೆ ಐನೂರು ರೂಪಾಯಿಗಳ ದಂಡ ವಿಧಿಸಬಹುದು ಎಂಬುವುದು ಮುಂಬೈ ಹೈಕೋರ್ಟಿನ ತೀರ್ಪು.

ಎತ್ತರದ ಮಹಡಿಗಳಲ್ಲಿ ವಾಸಿಸುವವರು ತಮ್ಮ ಕೋಣೆಯ ಬಾಲ್ಕನಿಗಳಲ್ಲಿ ಪಾರಿವಾಳಗಳಿಗೆ ಆಹಾರ ನೀಡುವಂತಿಲ್ಲ. ಫ್ಲ್ಯಾಟಿನ ಇತರ ನಿವಾಸಿಗಳಿಗೆ ಅದು ಸಮಸ್ಯೆಗಳನ್ನು ಉಂಟುಮಾಡುತ್ತದೆ ಎಂಬುವುದು ದೇಶದ ಅತ್ಯುನ್ನತ ನ್ಯಾಯಾಲಯದ ಮತ್ತೊಂದು ತೀರ್ಪು.

ಪಾರಿವಾಳಗಳಿಂದ ಉಂಟಾಗುವ ವಿವಿಧ ಸಮಸ್ಯೆಗಳು ನ್ಯಾಯಾಲಯದ ಮೆಟ್ಟಿಲೇರಿದ ಹಲವು ನಿದರ್ಶನಗಳಲ್ಲಿ ಇವೆರಡು ಮಹತ್ವದ್ದಾಗಿವೆ. ನ್ಯಾಯ ದೇವತೆ ಹೆಚ್ಚಿನ ಎಲ್ಲಾ ಕೇಸ್ ಗಳಲ್ಲಿ ಪಾರಿವಾಳಗಳ ಪರವಾಗಿ ತೀರ್ಪು ನೀಡಿಲ್ಲ. ಅದಕ್ಕೆ ಕಾರಣಗಳು ವೈಜ್ಞಾನಿಕವಾಗಿಯೇ ದೃಢೀಕರಿಸಲ್ಪಟ್ಟಿವೆ. ಆದ್ದರಿಂದ ಪಾರಿವಾಳಗಳನ್ನು ಆದಷ್ಟು ದೂರ ಮಾಡುವುದರೊಂದಿಗೆ ಸ್ವದೇಶಿ ಪಕ್ಷಿವರ್ಗಗಳನ್ನು ಸಂರಕ್ಷಿಸಲೂ, ಜೀವ ವೈವಿಧ್ಯತೆಯನ್ನು ಕಾಪಾಡಲೂ ನಮ್ಮಿಂದ ಸಾಧ್ಯವಾಗಲಿದೆ.

**ಪಾರಿವಾಳಗಳೊಂದಿಗೆ...**

- ಪಾರಿವಾಳಗಳ ಹಿಕ್ಕೆಯಲ್ಲಿರುವ ಯೂರಿಕ್ ಎಸಿಡ್, ನೈಟ್ರಜನ್ ಮುಂತಾದ ರಾಸಾಯನಿಕಗಳೇ ಸಮಸ್ಯೆಗಳಿಗೆ ಮೂಲ ಕಾರಣ. ಇದು ಮನುಷ್ಯರಿಗೆ ಅಲರ್ಜಿ ಹಾಗೂ ಶ್ವಾಸಕೋಶದ ತೊಂದರೆಗಳನ್ನು ಉಂಟು ಮಾಡುತ್ತದೆ.
- ಪಾರಿವಾಳಗಳ ಸಣ್ಣ ಪುಟ್ಟ ಗರಿಗಳೂ ಆಗಾಗ ಉದುರುತ್ತಿರುತ್ತವೆ. ಇವುಗಳು ಮನೆಯಂಗಳದ ವಾತಾವರಣದಲ್ಲಿ ಹಾರಾಡಿಕೊಂಡಿರುವುದು ಮನುಷ್ಯರ ಉಸಿರಾಟದ ಸಮಸ್ಯೆಗಳಿಗೆ ಕಾರಣವಾಗುತ್ತದೆ.
- ಗಿಡ ಮರಗಳನ್ನು ಆಶ್ರಯಿಸದೆ ಗೋಡೆಗಳ ಬಿರುಕುಗಳು, ಮಹಡಿ, ಮಾಡುಗಳ ಎಡೆಯಲ್ಲಿ ಇವುಗಳು ಗೂಡುಕಟ್ಟುವುದರಿಂದ ವಸತಿ ಸಮುಚ್ಚಯದಲ್ಲಿ ಶುಚಿತ್ವವನ್ನು ಪಾಲಿಸಲು ನಿರಂತರ ತಡೆಯಾಗುತ್ತದೆ. ಇದು, ಶುಚಿಗೊಳಿಸುವ ಕಾರ್ಮಿಕರಲ್ಲಿಯೂ ಆರೋಗ್ಯದ ಸಮಸ್ಯೆಗೆ ಕಾರಣವಾಗುತ್ತದೆ.
- ಪೇಟೆ ಪಟ್ಟಣಗಳಲ್ಲಿ ಪಾರಿವಾಳಗಳ ಸಂಖ್ಯೆ ಹೆಚ್ಚಾದರೆ ಸ್ವದೇಶಿ ಹಕ್ಕಿಗಳಾದ ಗುಬ್ಬಚ್ಚಿ, ಕಾಗೆ, ಮೈನ ಮೊದಲಾದವುಗಳ ಸ್ವಚ್ಛಂದ ಹಾರಾಟಕ್ಕೆ ಸ್ವಾತಂತ್ರ್ಯವಿಲ್ಲದಂತಾಗುತ್ತದೆ.
- ಮನುಷ್ಯರೊಂದಿಗೆ ಹೊಂದಿ ಕೊಂಡು ಬಾಳುವ ಗುಣ ಪಾರಿವಾಳಗಳಿಗಿದೆ.ಇದು ಅವುಗಳಿಗೆ ನಿತ್ಯವೂ ಆಹಾರ ನೀಡುವಂತೆ ಮನುಷ್ಯನನ್ನು ಪ್ರೇರೇಪಿಸುತ್ತದೆ. ಸುಲಭವಾಗಿ ಆಹಾರ ಸಿಗುವಲ್ಲಿ ಅವುಗಳು ಬೀಡು ಬಿಡುತ್ತವೆ.

**ರಾಜು ಕಿದೂರು**
ಅಧ್ಯಾಪಕರು,
ಹೋಲಿ ಫ್ಯಾಮಿಲಿ ಅನುದಾನಿತ ಶಾಲೆ,
ಕುಂಬಳೆ, ಕೇರಳ
ಇಮೇಲ್: rajukidoor@gmail.com

ಲೇಖನ 06

# ಹಾರುವ ಅಳಿಲು

ಸ್ನೇಹಿತರೇ, ನೀವು ನಿಮ್ಮ ಮನೆಯ ಹತ್ತಿರ ಮರಗಿಡಗಳಲ್ಲಿ ಅಳಿಲುಗಳನ್ನು ನೋಡಿರುತ್ತೀರಾ..? ಆದರೆ ಹಾರುವ ಅಳಿಲುಗಳನ್ನು ನೋಡಿದ್ದೀರಾ..? ಅವುಗಳ ಬಗ್ಗೆ ಕೇಳಿದ್ದೀರಾ..? ನಿಮಗೆ ಆಶ್ಚರ್ಯವಾಗುತ್ತಿರಬೇಕಲ್ಲವೇ..? ಬನ್ನಿ ನಿಮಗೆ ಹಾರುವ ಅಳಿಲುಗಳ ಬಗ್ಗೆ ಸಂಪೂರ್ಣವಾಗಿ ಮಾಹಿತಿ ತಿಳಿಸುತ್ತೇನೆ.



ಚಿತ್ರ ಕೃಪೆ : ವಿಝ್ ವಿಶ್ವನಾಥ್

ಸ್ನೇಹಿತರೇ, ಹಾರುವ ಅಳಿಲು ಒಂದು ರೀತಿಯ ಅಳಿಲು "ಹಾರುವ" ಸಾಮರ್ಥ್ಯಕ್ಕೆ ಹೆಸರುವಾಸಿಯಾಗಿದೆ. ಪ್ರಪಂಚದಾದ್ಯಂತ ಸುಮಾರು 50 ವಿವಿಧ ಜಾತಿಯ ಹಾರುವ ಅಳಿಲುಗಳನ್ನು ಕಾಣಬಹುದು. ಅಮೆರಿಕ ಮತ್ತು ಕೆನಡಾದ ಉತ್ತರ ಮತ್ತು ದಕ್ಷಿಣ ಭಾಗದಲ್ಲಿ ವಾಸಿಸುವ ಉತ್ತರ ಅಮೆರಿಕ ಮತ್ತು ದಕ್ಷಿಣ ಅಮೆರಿಕದ ಹಾರುವ ಅಳಿಲುಗಳು ಅತ್ಯಂತ ಪ್ರಸಿದ್ಧವಾಗಿವೆ. ಅವುಗಳನ್ನು ಪತನಶೀಲ, ಕೋನಿಫೆರಸ್ ಅಥವಾ ಮಿಶ್ರ ವಿಧದ ಕಾಡಿನಲ್ಲಿ ಕಾಣಬಹುದು. ಹಾರುವ ಅಳಿಲುಗಳು ಅಳಿವಿನಂಚಿನಲ್ಲಿಲ್ಲ.

ಸ್ನೇಹಿತರೇ, ಈ ಹಾರುವ ಅಳಿಲು ಸಾಮಾನ್ಯವಾಗಿ 30.48 ಸೆಂ.ಮೀ ಉದ್ದವನ್ನು ತಲುಪುತ್ತದೆ (ಬಾಲ ಸೇರಿದಂತೆ) ಮತ್ತು 113 ರಿಂದ 170 ಗ್ರಾಂ ತೂಕವಿರುತ್ತದೆ. ಗಂಡು ಮತ್ತು ಹೆಣ್ಣು ಒಂದೇ ರೀತಿ ಕಾಣುತ್ತವೆ. ಅವುಗಳ ಹಿಂಭಾಗ ಮತ್ತು ಬದಿಗಳಲ್ಲಿ ತುಪ್ಪಳವು ಕಂದು ಬಣ್ಣದಿಂದ ಬೂದು ಬಣ್ಣದ್ದಾಗಿರುತ್ತದೆ ಮತ್ತು ಹೊಟ್ಟೆಯ ಮೇಲೆ ಬಿಳಿಯಾಗಿರುತ್ತದೆ. ಬಾಲವು ಚಪ್ಪಟೆಯಾಗಿದ್ದು ದೊಡ್ಡದಾಗಿದೆ. ಇವು ಗಾಳಿಯ ಮೂಲಕ ತೇಲುವಾಗ ಬಾಲವನ್ನು ಚುಕ್ಕಾಣಿಯಾಗಿ (ಮಾರ್ಗದರ್ಶಕ) ಬಳಸುತ್ತವೆ. ಇವುಗಳನ್ನು "ಹಾರುವ ಅಳಿಲುಗಳು" ಎಂದು ಕರೆಯಲಾಗಿದ್ದರೂ, ಇವು ನಿಜವಾಗಿ ಹಾರುವುದಿಲ್ಲ. ಇವು ಗಾಳಿಯ ಮೂಲಕ ಜಾರುತ್ತವೆ. ಇವುಗಳ ಹಿಂಗಾಲು ಮತ್ತು ಮುಂಗಾಲುಗಳ ನಡುವೆ ಚರ್ಮವಿದ್ದು ಇದನ್ನು ಪೆಟಾಜಿಯಾ ಎಂದು ಕರೆಯುತ್ತಾರೆ.

ಮರದಿಂದ ಮರಕ್ಕೆ ಜಿಗಿಯುವಾಗ ಅಳಿಲುಗಳನ್ನು ಬೆಂಬಲಿಸುವ ಪ್ಯಾರಾಚೂಟ್ ಆಗಿ ಪೆಟಾಜಿಯಾ ಕಾರ್ಯನಿರ್ವಹಿಸುತ್ತದೆ. ಹಾರುವ ಅಳಿಲುಗಳು ಗಾಳಿಯಲ್ಲಿ ತೇಲುವಾಗ 180 ಡಿಗ್ರಿ ತಿರುವುಗಳನ್ನು ಮಾಡಬಹುದು. ಅತಿ ಉದ್ದವಾಗಿ ಹಾರಿದ ದಾಖಲಿತ 300 ಅಡಿಗಳು, ಆದರೆ ಸಾಮಾನ್ಯವಾಗಿ ಅದಕ್ಕಿಂತ ಕಡಿಮೆ ದೂರವನ್ನು ಪ್ರಯಾಣಿಸುತ್ತವೆ. ಸಾಮಾನ್ಯವಾಗಿ 20 ಮತ್ತು 30 ಅಡಿಗಳ ನಡುವೆ ಜಾರುತ್ತವೆ.

ಹಾರುವ ಅಳಿಲುಗಳು ತಮ್ಮ ದಪ್ಪ ಪಂಜಗಳನ್ನು ಇಳಿಯಲು ಕುಶನ್ (ಮೆತ್ತನೆಯ ದಿಂಬುಗಳಂತೆ) ಆಗಿ ಬಳಸುತ್ತವೆ. ಮರದ ಮೇಲೆ ಇಳಿದಾಗ, ಇವು ಮತ್ತೊಂದು ಜಿಗಿತಕ್ಕೆ ತಮ್ಮನ್ನು ಸಿದ್ಧಪಡಿಸಿಕೊಳ್ಳಲು ಸಾಧ್ಯವಾದಷ್ಟು ಎತ್ತರಕ್ಕೆ ಏರುತ್ತವೆ. ಹಾರುವ ಅಳಿಲುಗಳು ರಾತ್ರಿಯ (ರಾತ್ರಿಯಲ್ಲಿ ಸಕ್ರಿಯ) ಜೀವಿಗಳು. ದೊಡ್ಡದಾದ, ಉಬ್ಬುವ ಕಣ್ಣುಗಳು ಅವುಗಳಿಗೆ ಕತ್ತಲೆಯಲ್ಲಿ ನೋಡಲು ಸಹಾಯ ಮಾಡುತ್ತವೆ. ಹಾರುವ ಅಳಿಲುಗಳು ಸರ್ವಭಕ್ಷಕಗಳಾಗಿವೆ (ಮಾಂಸ ಮತ್ತು ಸಸ್ಯವರ್ಗ ಎರಡನ್ನೂ ತಿನ್ನುತ್ತವೆ). ಇವು ವಿವಿಧ ರೀತಿಯ ಆಹಾರವನ್ನು ತಿನ್ನಲು ಇಷ್ಟಪಡುತ್ತವೆ. ಗೊಂಡೆಹುಳುಗಳು, ಬಸವನ ಹುಳುಗಳು, ಇಲಿಗಳು, ಮೊಟ್ಟೆಗಳು, ಸಣ್ಣ ಹಕ್ಕಿಗಳು, ಅಣಬೆಗಳು, ಹಣ್ಣುಗಳು, ಬೀಜಗಳು, ಮರದ ತೊಗಟೆ, ಹೂವುಗಳನ್ನು ತಿನ್ನುತ್ತವೆ. ಹಾರುವ ಅಳಿಲುಗಳು ಹೈಬರ್ನೇಟ್ (ಚಳಿ ನಿದ್ದೆ) ಮಾಡುವುದಿಲ್ಲ. ಆದರೆ ಚಳಿಗಾಲದಲ್ಲಿ ತಮ್ಮ ಚಟುವಟಿಕೆಯನ್ನು ನಿಧಾನಗೊಳಿಸುತ್ತವೆ. ವರ್ಷದ ಈ ಸಮಯದಲ್ಲಿ ಆಹಾರದ ಮೂಲಗಳು ವಿರಳವಾಗಿರುವುದರಿಂದ, ಹಿಂದಿನ ವರ್ಷದಲ್ಲಿ ಸಂಗ್ರಹಿಸಿದ ಆಹಾರವನ್ನು ಸೇವಿಸುವ ಮೂಲಕ ಇವು ಹೆಚ್ಚಾಗಿ ಬದುಕುತ್ತವೆ.

ಹಾರುವ ಅಳಿಲುಗಳು ಒಂದು ಋತುವಿಗೆ 15000 ಕಾಯಿಗಳನ್ನು ಸಂಗ್ರಹಿಸಬಹುದು. ಹಾರುವ ಅಳಿಲುಗಳ ಮುಖ್ಯ ಪರಭಕ್ಷಕಗಳು ರಕೂನ್‌ಗಳು, ತೋಳಗಳು, ಗೂಬೆಗಳು, ನರಿಗಳು, ಹಾವುಗಳು, ಪಕ್ಷಿಗಳು, ಬೆಕ್ಕುಗಳು ಮತ್ತು ನಾಯಿಗಳು. ಹಾರುವ ಅಳಿಲುಗಳು ಹೆಚ್ಚು ಸಾಮಾಜಿಕ ಪ್ರಾಣಿಗಳಾಗಿವೆ. ಮರಕುಟಿಕಗಳು ಮಾಡಿದಂತಹ ಮರಗಳ ರಂಧ್ರಗಳಲ್ಲಿ ಇವು ವಾಸಿಸುತ್ತವೆ. ಅಳಿಲುಗಳ ದೊಡ್ಡ ಗುಂಪು ಒಂದೇ ರಂಧ್ರವನ್ನು ಹಂಚಿಕೊಳ್ಳಬಹುದು. ಸಮುದಾಯದಲ್ಲಿನ ಜೀವನದ ಮೂಲಕ ಅಳಿಲುಗಳು ತಮ್ಮ ಶಕ್ತಿಯನ್ನು ಸಂರಕ್ಷಿಸುತ್ತವೆ. ಹಾರುವ ಅಳಿಲುಗಳು ಬಾವಲಿಗಳು ಮತ್ತು ಗೂಬೆಗಳಂತಹ ಇತರ ಪ್ರಾಣಿಗಳೊಂದಿಗೆ ತಮ್ಮ ಗುಹೆಗಳನ್ನು ಹಂಚಿಕೊಳ್ಳಬಹುದು. ವಸಂತಕಾಲದ ಆರಂಭದಲ್ಲಿ ಮತ್ತು ಕೆಲವೊಮ್ಮೆ ಬೇಸಿಗೆಯ ಕೊನೆಯಲ್ಲಿ ಸಂಯೋಗ ಸಂಭವಿಸುತ್ತದೆ. ಹಾರುವ ಅಳಿಲುಗಳು ಸಾಮಾನ್ಯವಾಗಿ ವರ್ಷಕ್ಕೆ ಒಂದು ಸಲ ಮರಿಗಳಿಗೆ ಜನ್ಮ ನೀಡುತ್ತವೆ. ಗರ್ಭಾವಸ್ಥೆಯ ಅವಧಿ (ಗರ್ಭಧಾರಣೆ) 40 ದಿನಗಳವರೆಗೆ ಇರುತ್ತದೆ ಮತ್ತು ಹೆಣ್ಣು 2 ರಿಂದ 7 ಶಿಶುಗಳಿಗೆ ಜನ್ಮ ನೀಡುತ್ತವೆ.

ಶಿಶುಗಳು ಕೂದಲುರಹಿತ ಮತ್ತು ಕುರುಡಾಗಿದ್ದು, ಕಿವಿಗಳು ಮುಚ್ಚಲ್ಪಟ್ಟಿವೆ ಮತ್ತು ಕಾಲೆರಳುಗಳನ್ನು ಬೆಸೆಯಲಾಗುತ್ತದೆ. 2 ರಿಂದ 6 ದಿನಗಳ ನಂತರ ಕಿವಿ ತೆರೆಯುತ್ತವೆ. 6 ದಿನಗಳ ನಂತರ, ಕಾಲ್ಬೆರಳುಗಳು ಪರಸ್ಪರ ಬೇರ್ಪಡುತ್ತವೆ. ತುಪ್ಪಳವು 7 ದಿನಗಳ ನಂತರ ಬೆಳೆಯಲು ಪ್ರಾರಂಭಿಸುತ್ತದೆ ಮತ್ತು ಅಂತಿಮವಾಗಿ 24 ರಿಂದ 30 ದಿನಗಳ ನಂತರ ಕಣ್ಣುಗಳು ತೆರೆದುಕೊಳ್ಳುತ್ತವೆ. ಕಾಡಿನಲ್ಲಿ ಹಾರುವ ಅಳಿಲುಗಳ ಸರಾಸರಿ ಜೀವಿತಾವಧಿ 4 ರಿಂದ 5 ವರ್ಷ ಮತ್ತು ಸೆರೆಯಲ್ಲಿ 10 ರಿಂದ 15 ವರ್ಷಗಳವರೆಗೆ ಬದುಕುತ್ತವೆ. ದಕ್ಷಿಣ ಏಷ್ಯಾದಲ್ಲಿ 17 ಹಾರುವ ಪ್ರಭೇದಗಳಿದ್ದು, ನಮ್ಮ ಹೆಮ್ಮೆಯ ಕರ್ನಾಟಕದಲ್ಲಿ 2 ಹಾರುವ ಅಳಿಲುಗಳ ಪ್ರಭೇದಗಳಿವೆ. ಅವು ಯಾವುದೆಂದರೇ ಸಣ್ಣ ತಿರುವಾಂಕೂರು ಹಾರುವ ಅಳಿಲು ಮತ್ತು ದೊಡ್ಡ ಕಂದು ಬಣ್ಣದ ಹಾರುವ ಅಳಿಲು.

ಅಳಿಲುಗಳು ಕಾಡುಗಳಲ್ಲಿ ಹಣ್ಣುಗಳನ್ನು ತಿಂದು ಹಣ್ಣಿನ ಬೀಜಗಳನ್ನು ಕಾಡಿನ ತುಂಬೆಲ್ಲ ಚೆಲ್ಲಿ ಮರಗಳು ಹುಟ್ಟುವಂತೆ ಮಾಡುತ್ತವೆ. ಗೂಬೆಗಳಂತಹ ಸ್ಥಳೀಯ ಪರಭಕ್ಷಕಗಳಿಗೆ ಆಹಾರವನ್ನು ಒದಗಿಸುತ್ತವೆ. ಹಾರುವ ಅಳಿಲುಗಳು ದೊಡ್ಡ, ಸಂಕೀರ್ಣವಾದ ಅರಣ್ಯ ಪರಿಸರ ವ್ಯವಸ್ಥೆಗಳಲ್ಲಿ ಮುಖ್ಯವಾದ ಪಾತ್ರಗಳನ್ನು ನಿರ್ವಹಿಸುತ್ತವೆ.

ಆದರೆ ಆ ಪರಿಸರ ವ್ಯವಸ್ಥೆಗಳು ಮಾನವರಿಗೆ ಸಾಕಷ್ಟು ಮೌಲ್ಯಯುತವಾಗಿವೆ, ನೈಸರ್ಗಿಕ ಸಂಪನ್ಮೂಲಗಳ ಸಂಪತ್ತು ಮತ್ತು ಶುದ್ಧ ಗಾಳಿ, ಶುದ್ಧ ನೀರು ಮತ್ತು ಕಡಿಮೆ ಪ್ರವಾಹದಂತಹ ಪರಿಸರ ಸೇವೆಗಳನ್ನು ನೀಡುತ್ತವೆ.

**ಶ್ರೀ.ನವೀನ.ಪ್ಯಾಟಿಮನಿ**
**ಚರ್ಮ ಪ್ರಸಾಧನ ಕಲಾ ತಜ್ಞರು**
**ಪ್ರಾಣಿಶಾಸ್ತ್ರ ವಸ್ತುಸಂಗ್ರಹಾಲಯ, ಪ್ರಾಣಿಶಾಸ್ತ್ರ ವಿಭಾಗ,**
**ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯ, ಧಾರವಾಡ.**

# ವನ್ಯ

ಹಸಿರು ಲೋಕದ ಕೌತುಕ

# ನೀವು ವನ್ಯಕ್ಕೆ ಬರಿಯಬಹುದು

**"ವನ್ಯ"**

ಅಘನಾಶಿನಿ ನೇಚರ್ ಫೌಂಡೇಶನ್ ಪ್ರಸ್ತುತಪಡಿಸುವ ಪ್ರಕೃತಿ, ಅರಣ್ಯ, ವನ್ಯಜೀವಿ ಮತ್ತು ಜೀವ ವೈವಿಧ್ಯತೆಗೆ ಸಂಬಂಧಪಟ್ಟ ಕನ್ನಡದ ಆನ್ಲೈನ್ ಮಾಸ ಪತ್ರಿಕೆ.

ಪ್ರಕೃತಿ, ಅರಣ್ಯ, ವನ್ಯಜೀವಿ ಮತ್ತು ಜೀವ ವೈವಿಧ್ಯತೆಗೆ ಸಂಬಂಧಪಟ್ಟ ಲೇಖನಗಳಿಗೆ ಸ್ವಾಗತ.

ಲೇಖನ ಕನ್ನಡ ಭಾಷೆಯಲ್ಲಿರಬೇಕು ಮತ್ತು 1000 ಪದಗಳಿಗೆ ಮೀರದಂತೆ ಮತ್ತು pdf ಅಥವಾ ವರ್ಡ್ ಸ್ವರೂಪದಲ್ಲಿ ಕಳುಹಿಸಬೇಕು.

ಲೇಖನವನ್ನು **aghanaashini24@gmail.com**
ಗೆ ಇ-ಮೇಲ್ ಮಾಡಿ.

Aghanaashini Nature Foundation
Flow of Knowledge


ಚಿತ್ರ ಕೃಪೆ:ಅಶೋಕ್ ಎನ್